ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಮಾರ್ಚ್ 2026 ಮಾಸ ಪತ್ರಿಕೆ

ಸಂಪುಟ/Volume : 48
ಸಂಚಿಕೆ/Issue : 6
ಪುಟ/Pages : 12
ಬೆಲೆ/Price : ₹ 15/–

Akhila Karnataka Shikshaka Samachar | March 2026 | Monthly







A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

ಆತ್ಮೀಯರೇ,

ಆತ್ಮೀಯರೇ ಯುಗಾದಿ ನಮ್ಮೆಲ್ಲರಿಗೂ ಹೊಸ ವರ್ಷ. ಈ ಹಬ್ಬವನ್ನು ಪ್ರಾಚೀನ ಕಾಲದಿಂದಲೂ ನಮ್ಮ ಹಿಂದೂಸ್ಥಾನದಲ್ಲಿ ಚೈತ್ರಮಾಸದ ಮೊದಲ ದಿನದಂದು ಆಚರಿಸುವ ಪದ್ಧತಿ ಇದೆ. "ಯುಗ ಯುಗಾದಿ ಕಳೆದರು ಯುಗಾದಿ ಮರಳ ಬರುತಿದೆ ಹೊಸ ವರುಷಕೆ ಹೊಸ ಹರುಷವ ತರುತಿದೆ". ಎಂದು ಕವಿ ದ. ರಾ. ಬೇಂದ್ರೆಯವರು ಸೂಚ್ಯವಾಗಿ ಕವನ ರೂಪದಲ್ಲಿ ಹೇಳಿದ್ದಾರೆ.

ಯುಗಾದಿಯ ಈ ದಿನ ಬೇವು ಮತ್ತು ಬೆಲ್ಲ ಎರಡನ್ನೂ ಸ್ವೀಕರಿಸುತ್ತೇವೆ. ಅಂದರೆ ಜೀವನದಲ್ಲಿ ಸುಖ ಮತ್ತು ದುಃಖ ಎರಡೂ ಅನುಭವಿಸಬೇಕಾಗುತ್ತದೆ ಎಂಬ ಸಂದೇಶವನ್ನು ಸಾರುವ ಹಬ್ಬವಾಗಿದೆ. ನಿಸರ್ಗದಲ್ಲಿ ಹೊಸ ಚಿಗುರು, ಹೂ ಗಳು ಅರಳುವ ಸಮಯ. ಇದು ವಸಂತ ಋತುವಿನ ಆಗಮನವನ್ನು ಸೂಚಿಸುತ್ತದೆ.

ಯುಗಾದಿಯ ಈ ಹೊಸ ವರುಷದಲ್ಲಿ ನಮ್ಮ ಬಂಧುಗಳಿಗೆ, ಸಹೋದರ, ಸಹೋದರಿಯರಿಗೆ , ಸ್ನೇಹಿತರಿಗೆ "ಯುಗಾದಿಯ ಹೊಸ ವರುಷದ ಶುಭಾಶಯಗಳು" ಎಂಬ ಸಂದೇಶವನ್ನು ತಿಳಿಸುವುದು ನಮ್ಮ ಕರ್ತವ್ಯವಲ್ಲವೇ? ಇದನ್ನು ನಾವೆಲ್ಲರೂ ಮಾಡೋಣ. ಇದರ ಜೊತೆಗೆ ನಮ್ಮ ವಿದ್ಯಾರ್ಥಿಗಳಿಗೂ ಇದನ್ನು ತಿಳಿಸುವುದು ಕೂಡ ಮುಖ್ಯವಾಗಿದೆ.

ಈ ಮಾರ್ಚ್ ಮಾಹೆಯು ವಿದ್ಯಾರ್ಥಿಗಳೆಲ್ಲರಿಗೂ ಪರೀಕ್ಷೆಯ ಪ್ರಾರಂಭದ ಕಾಲವಾಗಿದ್ದು, ಈಗಾಗಲೇ ಪರಿಪೂರ್ಣವಾಗಿ ಪರೀಕ್ಷೆಗಾಗಿ ಸಿದ್ಧತೆ ಮಾಡಿಕೊಂಡಿದ್ದೀರಿ. ಇನ್ನೂ ಸಮಯಾವಕಾಶವಿರುವುದರಿಂದ ವಿಷಯಗಳನ್ನು ಪುನರ್ಮನನ ಮಾಡಿಕೊಳ್ಳಿ. ನಿಮಗೇನಾದರೂ ವಿಷಯಕ್ಕೆ ಹಾಗೂ ಪರೀಕ್ಷೆಗೆ ಸಂಬಂಧಿಸಿದ ಸಂಶಯಗಳೇನಾದರೂ ಇದ್ದಲ್ಲಿ ವಿದ್ಯಾರ್ಥಿಗಳಾದ ನೀವು ಶಿಕ್ಷಕರಿಂದ ಪರಿಹರಿಸಿಕೊಳ್ಳಬೇಕು. ಇದೇ ರೀತಿ ಶಿಕ್ಷಕರೂ ಕೂಡ ತಮ್ಮ ವಿದ್ಯಾರ್ಥಿಗಳ ಏಳಿಗೆಗಾಗಿ ವಿಶೇಷ ತರಗತಿಗಳು ಹಾಗೂ ವಿವಿಧ ವಿಧಾನಗಳ ಮೂಲಕ ವಿದ್ಯಾರ್ಥಿಗಳನ್ನು ಪರೀಕ್ಷೆಗಾಗಿ ಸಿದ್ಧಮಾಡುತ್ತಿದ್ದೀರಿ. ನಿಮ್ಮ ಶ್ರಮವು ಸಾರ್ಥಕವಾಗಲಿ, ನಿಮ್ಮ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸುವಂತಾಗಲಿ ಹಾಗೂ ಸತ್ಪ್ರಜೆಗಳಾಗಲಿ ಎಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಶುಭವನ್ನು ಹಾರೈಸುತ್ತದೆ.

ಸಮಸ್ತ ಓದುಗರಿಗೆ ಯುಗಾದಿ ಹೊಸವರ್ಷದ ಶುಭಾಶಯಗಳು.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ನಮ್ಮ ಹೊಸವರ್ಷ ಯಾವುದು?
  – ಹೆಚ್. ನಾಗಭೂಷಣ್ ರಾವ್ 3
- ಪರೀಕ್ಷೆಗಳು ಮತ್ತು ನಾವು
  – ಚಿದಾನಂದ ಆ ಕೇಸ್ಕರ ಪಾಟೀಲ 5
- ರಾಮಾಯಣದಲ್ಲಿನ ಸಾಂಸ್ಕೃತಿಕ ಮೌಲ್ಯಗಳು
  – ನಂ. ನಾಗಲಕ್ಷ್ಮಿ 6
- ಕಸದಿಂದ ರಸ – ಆವಿಷ್ಕರಿಸಿದ ಮಹಿಳಾ ವಿಜ್ಞಾನಿ ಡಾ॥ ಸಂಧ್ಯಾ ಶೆಣೈ ಬಿ.ಎಸ್
  – ಆರ್. ಸೀತಾಲಕ್ಷ್ಮಿ 7
- ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳ ಮಾನಸಿಕ ಒತ್ತಡ ನಿರ್ವಹಣೆ
  – ಶ್ರೀಮತಿ ಲಕ್ಷ್ಮೀಸಿಂಗ್ ಬಿ. 8
- ಚಿತ್ರ ಸುದ್ದಿ 11
- ಭಾರತದ ಶಿಕ್ಷಿತ ಜನರು ಚರಿತ್ರಯುತರಾಗಲಿ: ದತ್ತಾತ್ರೇಯ ಹೊಸಬಾಳೆ 12

# ನಮ್ಮ ಹೊಸವರ್ಷ ಯಾವುದು?






**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**


ಆತ್ಮೀಯ ಶಿಕ್ಷಕ ಬಂಧುಗಳೇ ನಮಸ್ಕಾರ.

ನಿಮಗೊಂದು ಪತ್ರ ಬರೆಯಬೇಕೆಂದು ಬಹಳ ದಿನಗಳಿಂದ ಅನಿಸುತ್ತಿತ್ತು. ಯಾವ ವಿಷಯ ಕುರಿತು ಬರೆಯಲಿ ಎಂದು ಹೊಳೆದಿರಲಿಲ್ಲ. ಗೆಳೆಯರೊಬ್ಬರು ನನ್ನ ಚರವಾಣಿಯಲ್ಲಿ ಕರೆಮಾಡಿ "ಮುಂಬರುವ ಜನವರಿ ಒಂದನ್ನು ಬಿಡುವಾಗಿ ಇಟ್ಟುಕೊಳ್ಳಿ. ಅಂದು ನಾವು ಐದಾರು ಗೆಳೆಯರು ಒಟ್ಟಿಗೆ ಸೇರೋಣ. ಹೊಸ ವರ್ಷವನ್ನು ಸ್ವಾಗತಿಸಿ ಸಂಭ್ರಮಿಸೋಣ". ವಿಷಯದ ಗ್ರಾಸವೂ ಸಿಕ್ಕಿತು.

12 ತಿಂಗಳು, 365 ದಿನಗಳಿರುವ ವರ್ಷದಲ್ಲಿ ಎರಡು ಹೊಸವರ್ಷಗಳು ಪ್ರಾರಂಭವಾಗುವುದು ಹೇಗೆ ಸಾಧ್ಯ? ಜನವರಿ 1ರಂದು ಹೊಸ ವರ್ಷದ ಪ್ರಾರಂಭವೆಂದು ಭಾವಿಸಿದರೆ ಅದನ್ನು ಆಚರಿಸುವ ರೀತಿ ಹೇಗಿರುತ್ತದೆ ಎನ್ನುವುದಕ್ಕೆ 30 ವರ್ಷಗಳ ಹಿಂದಿನ ನನ್ನದೊಂದು ಜೀವನಾನುಭವ ತಿಳಿಸುತ್ತೇನೆ. ಅಂದು ಡಿಸೆಂಬರ್ 31, ನನ್ನ ಪಕ್ಕದ ಮನೆಯ ಗೃಹಸ್ಥನಿಗೆ ಹೃದಯಾಘಾತವಾಯ್ತು. ನನಗೆ ಅವರ ಮನೆಯಿಂದ ಅಳುತ್ತಿರುವ ಸದ್ದು ಕೇಳಿಸಿತು. ಕೂಡಲೇ ಕಾಂಪೌಂಡ್ ಗೋಡೆ ಹಾರಿ ಅವರ ಮನೆಗೆ ತೆರಳಿ ಸಮಾಧಾನ ಪಡಿಸಿ, ನಮ್ಮ ಮನೆಗೆ ಹತ್ತಿರದಲ್ಲೇ ಇದ್ದ ವೈದ್ಯಕೀಯ ವಿದ್ಯಾಭ್ಯಾಸ ಮಾಡುತ್ತಿದ್ದ ನನ್ನ ವಿದ್ಯಾರ್ಥಿ ಪ್ರತಾಪನನ್ನ ಕರೆದುತಂದು, ಪ್ರಥಮ ಚಿಕಿತ್ಸೆ ಕೊಡಿಸಿ, ಅವನೊಂದಿಗೆ ಆ ಗೃಹಸ್ಥನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿದೆ. ರಾತ್ರಿ ಹತ್ತೂವರೆ ಆದರೂ ಪ್ರತಾಪ ಹಿಂದಿರುಗಲಿಲ್ಲ. ಅವರ ಅಮ್ಮ ಗಾಬರಿಯಿಂದ ದೂರವಾಣಿಗೆ ಕರೆ ಮಾಡಿದರು, ಕೂಡಲೇ ನಾನು ಸ್ಕೂಟರ್ ಹತ್ತಿ ಆಸ್ಪತ್ರೆಯ ಕಡೆ ಹೊರಟೆನು. ಮನಸ್ಸಿನಲ್ಲಿ ದುಗುಡ, ಆತಂಕ. ಕೆ.ಆರ್ ರಸ್ತೆಯಲ್ಲಿರುವ ಕಿಮ್ಸ್ ಆಸ್ಪತ್ರೆಯ ಬಳಿ 25–30 ರ ತರುಣರ ಗುಂಪು ನನ್ನನ್ನು ತಡೆದರು. ಅವರೆಲ್ಲರ ಕೈಯಲ್ಲಿ ಮದ್ಯದ ಬಾಟಲಿಗಳು. ಎಲ್ಲರೂ ಕುಡಿದು ಕೇಕೆ ಹಾಕುತ್ತಾ ನೃತ್ಯ ಮಾಡುತ್ತಿದ್ದಾರೆ. ನನ್ನ ಪರಿಸ್ಥಿತಿ ವಿವರಿಸಿದೆ. "ಇಲ್ಲ, ನೀವು ಹೋಗುವಂತಿಲ್ಲ. ನಮ್ಮೊಂದಿಗೆ ಹೊಸವರ್ಷಕ್ಕೆ ಸ್ವಾಗತ ಕೋರುವ ಸಂಭ್ರಮದಲ್ಲಿ ಭಾಗವಹಿಸಲೇಬೇಕು" ಎಂದು ಒತ್ತಾಯ ಮಾಡಿ ನನಗೆ ಮದ್ಯ ಕುಡಿಸುವ ಪ್ರಯತ್ನ ಮಾಡಿದರು. ನಾನು ಪ್ರತಿಭಟಿಸಿದಾಗ ತಲೆಗೆ ಅಭಿಷೇಕ ಮಾಡಿದರು. ಆ ಗುಂಪಿನಲ್ಲೂ ಓರ್ವ ಸಭ್ಯನಿದ್ದ. ಅವನು ಆಸ್ಪತ್ರೆಗೆ ಹೋಗಲು ನನ್ನನ್ನು ಬಿಡುಗಡೆಗೊಳಿಸಿದ. ಇದು ನಡೆದ ಕಥೆ. ಅವರೆಲ್ಲರೂ ವೈದ್ಯಕೀಯ ವಿದ್ಯಾರ್ಥಿಗಳು ಎಂಬುದೇ ಆಶ್ಚರ್ಯ!

ಬೆಂಗಳೂರಿನ ಪ್ರಸಿದ್ಧ ಮಹಾತ್ಮಗಾಂಧಿ ರಸ್ತೆ( ಎಂ.ಜಿ.ರಸ್ತೆ)ಗೆ ಡಿಸೆಂಬರ್ 31ರಂದು ನೂರಾರು ಪೋಲೀಸರ ಕಾವಲಿನಲ್ಲಿ ಹೊಸವರ್ಷದ ಆಚರಣೆಯ ದೃಶ್ಯ ಕಾಣುವಿರಿ. ಎಲ್ಲ ಮದ್ಯದಂಗಡಿಗಳಿಗೂ ವಿಶೇಷ ಅಲಂಕಾರ. ಅದರ ಒಳಗಡೆ, ಹೊರಗಡೆ ಜನವೋ ಜನ. ಅದರಲ್ಲೂ ತರುಣ, ತರುಣಿಯರ ಗುಂಪುಗಳು ಮೈ ಮೇಲೆ ಪರಿವೇ ಇಲ್ಲದೆ ವಿಕೃತ ನೃತ್ಯ, ಹುಚ್ಚಾಟ, ಕುಣಿದಾಟ, ರಾತ್ರಿ 12ಕ್ಕೆ ಪಟಾಕಿ ಸಿಡಿಸುವುದು ಕೇಕೆ ಹಾಕುವುದು. ಮುಂಜಾನೆ ವೇಳೆ ಮನೆಯೋ, ಅಪಘಾತ ಮಾಡಿಕೊಂಡು ಆಸ್ಪತ್ರೆಯೋ ಸೇರುವುದು! ಅನೇಕ ಹಿರಿಯರೂ ಈ ಸಂಭ್ರಮದಲ್ಲಿ ಪಾಲ್ಗೊಳ್ಳುವುದನ್ನು ಪತ್ರಿಕೆಯ ಫೋಟೋಗಳಲ್ಲಿ, ಇತ್ತೀಚೆಗೆ ಟಿ.ವಿಯ ಪರದೆಯ ಮೇಲೆ ನೋಡಿರುವೆ, ನೀವೂ ನೋಡಿರಬಹುದು. ಇದು ಪಾಶ್ಚಾತ್ತೀಕರಣ, ಕ್ರಮೇಣ ನಮ್ಮೊಳಗೆ ಪ್ರವೇಶ ಮಾಡುತ್ತಿರುವುದರ ಸಂಕೇತ.

## ಜನವರಿ 1 ರಿಂದ ವರ್ಷಾರಂಭದ ಪದ್ಧತಿ ಬಂದಿದ್ದಾದರೂ ಹೇಗೇ? ಎಲ್ಲಿಂದ?

ಪ್ರಾಚೀನ ರೋಮನ್ ಸಾಮ್ರಾಜ್ಯದಲ್ಲಿ ವರ್ಷವು ಪ್ರಾರಂಭವಾಗುತ್ತಿದ್ದುದು ಮಾರ್ಚ್ ತಿಂಗಳ 25ರಿಂದ ಹಾಗೂ ವರ್ಷದಲ್ಲಿ ಇದ್ದುದೇ ಹತ್ತು ತಿಂಗಳು. ರೋಮನ್ ದೇವತೆಗಳ ಹೆಸರಿನಲ್ಲಿ ಮಾರ್ಚ್, ಏಪ್ರಿಲ್, ಮೇ, ಜೂನ್ ನಂತರದ ತಿಂಗಳುಗಳು 5,6,7,8,9,10 ಎಂದು ಸಂಗತಿಗಳ ಪ್ರಾರಂಭಕ್ಕೆ 'ಜನಸ್' ಎಂಬ ಅವರ ದೇವತೆ, "ಅಧಿದೇವತ" ಆಗಿದ್ದಳು. ಫೆಬ್ರವರಿಯನ್ನು 2ನೇ ತಿಂಗಳಾಗಿ ಸೇರಿಸಿ 12 ತಿಂಗಳಾಯಿತು. 7,8 ನೇ ತಿಂಗಳನ್ನು ಕ್ರಿ.ಪೂ 44ರಲ್ಲಿ ದೊರೆ ಜ್ಯೂಲಿಯಸ್ ಸೀಸರ್ ನ ಹೆಸರಿನಲ್ಲಿ ಜುಲೈ ತದನಂತರದ ದೊರೆ 'ಅಗಸ್ಟಸ್' ಹೆಸರಲ್ಲಿ ಆಗಸ್ಟ್ ಸೇರಿತು. ಇದರ ಇಂದಿನ ಕ್ಯಾಲೆಂಡರ್‌ನ ಸೂಕ್ಷ್ಮ ಇತಿಹಾಸ. ಈ ಎಣಿಕೆಯಲ್ಲಿ ಎಲ್ಲಾದರೂ ವೈಜ್ಞಾನಿಕತೆಯನ್ನು ಕಂಡಿದ್ದೀರಾ? ಇಂದಿಗೂ ತಿಂಗಳುಗಳ ಹೆಸರಿಗೂ, 7,8,9,10 ಎಂಬ ಸಂಖ್ಯೆಗಳಿಗೂ ಸಂಬಂಧವಿಲ್ಲ!

## ನಮ್ಮ ಹೊಸ ವರ್ಷಾರಂಭ "ಯುಗಾದಿ" ಏಕೆ?

ಹಿಂದುಗಳ ನಂಬಿಕೆಯಂತೆ ಬ್ರಹ್ಮನು ಸೃಷ್ಟಿಯನ್ನು ಪ್ರಾರಂಭಿಸಿದ್ದ

**ಪುಟ 4 ಕ್ಕೆ ➢**

➢ ಪುಟ 3 ರಿಂದ.....

ಈ ದಿನದಿಂದ ಅದಕ್ಕಾಗಿ ಯುಗದ ಆದಿ "ಯುಗಾದಿ" ನಮ್ಮ ಹೊಸ ವರ್ಷ ಪ್ರಾರಂಭವಾಗುವುದು ಚೈತ್ರ ಮಾಸದ ಮೊದಲ ದಿನದಿಂದ(ಪಾಡ್ಯ). ಏಕೆಂದರೆ ಹಿಂದೂ ಕ್ಯಾಲೆಂಡರ್ ಪ್ರಕೃತಿಯೊಂದಿಗೆ ಸಮ್ಮಿಳಿತವಾಗಿದೆ ಇಲ್ಲಿ ಯಾವುದೇ ವ್ಯಕ್ತಿಗೆ ಪ್ರಾಮುಖ್ಯತೆ ಇಲ್ಲ. ಭೂಮಿಯು ಸೂರ್ಯನ ಸುತ್ತ ಸುತ್ತದ ಆಧಾರದ ಮೇಲೆ ನಮ್ಮ ಕಾಲಗಣನೆ ಆಧಾರಿತವಾಗಿದೆ. ವರ್ಷವನ್ನು ಆರಾರು ತಿಂಗಳುಗಳಾಗಿ ಉತ್ತರಾಯಣ ಮತ್ತು ದಕ್ಷಿಣಾಯನ ಎಂದು ವಿಭಜಿಸಲಾಗಿದೆ. ಭೂಮಧ್ಯೆ ರೇಖೆಯಿಂದ ಉತ್ತರಕ್ಕೆ ಸೂರ್ಯ ಚಲಿಸಿದರೆ ಉತ್ತರಾಯಣ, ದಕ್ಷಿಣಕ್ಕೆ ಚಲಿಸುವಾಗ ದಕ್ಷಿಣಾಯನ ಜನವರಿ 15 ರಿಂದ ಜುಲೈ 15ರವರೆಗೆ ಉತ್ತರಾಯಣ. ಆಗ ಬೆಳಕು ಹೆಚ್ಚಾಗುತ್ತಾ ಹೋಗುತ್ತದೆ, ಮತ್ತೆ ಜುಲೈ 16ರಿಂದ ಜನವರಿ 14ರವರೆಗೆ ದಕ್ಷಿಣಾಯನ. ಆಗ ಕತ್ತಲು ಹೆಚ್ಚಾಗುತ್ತಾ ಹೋಗುತ್ತದೆ. ಆಯನಗಳನ್ನು ವಸಂತ, ಗ್ರೀಷ್ಮ, ವರ್ಷ ಶರತ್, ಹೇಮಂತ ಮತ್ತು ಶಿಶಿರವೆಂದು 6 ಋತುಗಳಾಗಿ ವಿಂಗಡಿಸಿದೆ. ಪ್ರತಿ ಋತುವಿಗೂ ಎರಡೆರಡು ತಿಂಗಳುಗಳನ್ನು ಈ ಕೆಳಕಂಡಂತೆ ಜೋಡಿಸಿದೆ.

| | | |
|---|---|---|
| ಚೈತ್ರ – ವೈಶಾಖ | → | **ವಸಂತ ಋತು** |
| ಜ್ಯೇಷ್ಠ – ಆಷಾಢ | → | **ಗ್ರೀಷ್ಮ ಋತು** |
| ಶ್ರಾವಣ – ಭಾದ್ರಪದ | → | **ವರ್ಷ ಋತು** |
| ಆಶ್ವಯುಜ – ಕಾರ್ತಿಕ | → | **ಶರದೃತು** |
| ಮಾರ್ಗಶಿರ – ಪುಷ್ಯ | → | **ಹೇಮಂತ ಋತು** |
| ಮಾಘ – ಫಾಲ್ಗುಣ | → | **ಶಿಶರ ಋತು** |

## ಚಾಂದ್ರಮಾನ ವರ್ಷ ಎಂದರೇನು?

ಭೂಮಿಯ ಸುತ್ತ ಚಂದ್ರನ ಚಲನೆಯನ್ನು ಆಧರಿಸಿ ವರ್ಷದಲ್ಲಿನ ದಿನಗಳನ್ನು ಲೆಕ್ಕ ಮಾಡುವುದಕ್ಕೆ 'ಚಾಂದ್ರಮಾನ' ಎಂದು ಕರೆಯುತ್ತೇವೆ. ಇದರಂತೆ ಅಮಾವಾಸ್ಯೆಯಿಂದ ಅಮಾವಾಸ್ಯೆಗೆ ಒಂದು ತಿಂಗಳು. ಇಂತ 12 ತಿಂಗಳು ಸೇರಿ ಒಂದು ವರ್ಷ. ಈ ವ್ಯವಸ್ಥೆಯಲ್ಲಿ ವರ್ಷಕ್ಕೆ '354' ದಿನ ಮಾತ್ರ. ಮೂರುವರ್ಷಕ್ಕೊಮ್ಮೆ ಅಧಿಕವಾಗಿ 31 ದಿನ ಸೇರಿಸಿ 1 ತಿಂಗಳು ಹೆಚ್ಚಿಸಿ ಅಧಿಕಮಾಸವೆಂದು ಕರೆಯುತ್ತಾರೆ. ಚಾಂದ್ರಮಾನವನ್ನು ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರದಲ್ಲಿ ಪರಿಗಣಿಸುತ್ತಾರೆ. ಕರಾವಳಿ ಹಾಗೂ ತಮಿಳುನಾಡಿನಲ್ಲಿ ಸೌರಮಾನವನ್ನು ಆಚರಿಸುತ್ತಾರೆ.

## ಸೌರಮಾನ ವರ್ಷ ಎಂದರೇನು?

ರಾಶಿ ಚಕ್ರದಲ್ಲಿ ಸೂರ್ಯನ ಚಲನೆಯನ್ನು ಆಧರಿಸಿ ವರ್ಷದಲ್ಲಿನ ದಿನಗಳನ್ನು ಲೆಕ್ಕ ಮಾಡುವುದಕ್ಕೆ ಸೌರಮಾನ ಎಂದು ಹೆಸರು. ಸೌರಮಾನ ವರ್ಷದಲ್ಲಿ 365 ದಿನಗಳು ಇರುತ್ತದೆ. ತಮಿಳುನಾಡು, ಕೇರಳ, ಬಂಗಾಲ, ಒರಿಸ್ಸಾ, ಅಸ್ಸಾಂ ಹಾಗೂ ಪಂಜಾಬ್‌ಗಳಲ್ಲಿ ಸೌರಮಾನ ವರ್ಷವನ್ನು ಆಚರಿಸುವ ಪದ್ಧತಿ ಇದೆ.

## ನಮ್ಮ ಯುಗಾದಿಯ ವಿಶೇಷವೇನು?

ನಮ್ಮ ಯುಗಾದಿಯಂದು ಹೊಸವರ್ಷದ ಹುಟ್ಟು ಎಂದು ತಿಳಿದಾಯ್ತು. ಅದರ ವಿಶೇಷವನ್ನು ಗಮನಿಸೋಣ. ಭಾರತದಲ್ಲಿ ಇಂದಿಗೂ ಇದನ್ನೇ ಎಲ್ಲ ಬಗೆಯ ವ್ಯಾಪಕ, ವ್ಯವಹಾರಕ್ಕೆ ಬಳಸುತ್ತಿರುವುದು. ಸರ್ಕಾರದ ಗೆಜೆಟ್‌ನಲ್ಲಿ ಟಿ.ವಿ, ಆಕಾಶವಾಣಿಯ ಸುದ್ದಿ ಪ್ರಸಾರದಲ್ಲಿ ಬಳಸುತ್ತಿರುವುದು ಇದೇ ಕ್ಯಾಲೆಂಡರ್.

## ಪ್ರಕೃತಿಯಾಧಾರಿತ

ಶಿಶಿರ ಮಾಸದಲ್ಲಿ ಪ್ರಕೃತಿಯನ್ನು ಗಮನಿಸಿ. ಗಿಡ, ಮರಗಳು ತಮ್ಮ ಎಲೆಗಳನ್ನು ಉದುರಿಸಿ ವಸಂತದಲ್ಲಿ ಹೊಸ ಎಲೆಗಳು ಚಿಗುರೊಡೆದು ಪ್ರಕೃತಿ ನಳ ನಳಿಸುವುದನ್ನು ಕಾಣುತ್ತೇವೆ. ಕೋಗಿಲೆ ಕಾಂಚಾಣಗಳ ಮಧುರ ಗಾನವನ್ನು ಆಲಿಸುತ್ತೇವೆ. ನವಿಲುಗಳು ಗರಿಬಿಚ್ಚಿ ಕುಣಿಯುವುದನ್ನು ನೋಡುತ್ತೇವೆ. ಈ ದೃಶ್ಯ ಮನಸ್ಸಿಗೆ ಮುದನೀಡುವುದಿಲ್ಲವೇ? ಆದ್ದರಿಂದಲೇ ವಸಂತವನ್ನು ಕವಿ ಬಿ.ಎಂ. ಶ್ರೀಕಂಠಯ್ಯನವರು 'ಋತುಗಳ ರಾಜ' ಎಂದು ಬಣ್ಣಿಸಿರುವುದು. ಇಂಥ ಚೈತ್ರ ಮಾಸದ ಮೊದಲ ದಿನವೇ ನಮ್ಮ ನವ ವರ್ಷಾರಂಭ "ಯುಗಾದಿ". ಜನವರಿ ತಿಂಗಳು ಬರುವುದು ಶಿಶಿರ ಮಾಸದಲ್ಲಿ ಅಂದರೆ ಚಳಿಗಾಲದಲ್ಲಿ. ಅಂದರೆ ಚಳಿಗಾಲದಲ್ಲಿ ಗಿಡಮರಗಳಲ್ಲಿ ಎಲೆಗಳು ಉದುರುವ ಕಾಲ. ಮನುಷ್ಯರಲ್ಲಿ ಶರೀರ ಮುದುಡುವ ಕಾಲ, ಮೈಯೊಡೆಯುವ ಕಾಲ. ಇಂಥ ಸಮಯದಲ್ಲಿ ಪಾಶ್ಚಾತ್ಯರ ಅಂಧಾನುಕರಣೆ ಮಾಡಿ ಹೊಸವರ್ಷ ಆಚರಿಸುತ್ತೇವೆ. "ನಮ್ಮ ಹೊಸ ವರ್ಷಾಚರಣೆ ಎಂದರೆ ಹಿಗ್ಗುವ ಕಾಲ ಅವರದ್ದು ಕುಗ್ಗುವ ಕಾಲ" ಇದೇ ವ್ಯತ್ಯಾಸ. ಹಾಗಾದರೆ ನಿಜವಾದ ಹೊಸವರ್ಷಾಚರಣೆ ಯಾವಾಗ ಮಾಡಬೇಕೆಂದು ಯೋಚಿಸಿ ನೋಡಿ.

ನಿಜ ಗ್ರಿಗೋರಿಯನ್ ಎಂದು ಕರೆಯುವ ಈಗಿನ ಕ್ಯಾಲೆಂಡರ್ ಅನ್ನು 1582ರಲ್ಲಿ 13ನೇ ಒಫಪ್ ಗ್ರಿಗೋರಿ ಘೋಷಿಸಿದ್ದು. ಬ್ರಿಟಿಷ್ ಆಡಳಿತವಿದ್ದ ಎಲ್ಲ ದೇಶಗಳಲ್ಲಿ ಇದನ್ನೇ ಅನುಸರಿಸುವುದು. ಬ್ರಿಟೀಷ್ ಆಡಳಿತವಿದ್ದ ಭಾರತದಲ್ಲೂ ಇದನ್ನೇ ಎಲ್ಲ ಬಗೆಯ ವ್ಯವಹಾರಕ್ಕೆ ಬಳಸುತ್ತಿರುವುದು. ಸರ್ಕಾರದ ಗೆಜಟ್ ನಲ್ಲಿ ಟಿ.ವಿ ಆಕಾಶವಾಣಿಯ ಸುದ್ದಿ ಪ್ರಸಾರದಲ್ಲಿ ಬಳಸುತ್ತಿರುವುದು ಇದೇ ಅವೈಜ್ಞಾನಿಕ ಕ್ಯಾಲೆಂಡರ್.

## ಶಿಕ್ಷಕರಾಗಿ ನಮ್ಮ ಪಾತ್ರ

ಇಂದಿಗೂ ಧಾರ್ಮಿಕ ಆಚರಣೆಯಲ್ಲಿ ಬಳಸುತ್ತಿರುವುದು ನಮ್ಮ ಪಂಚಾಂಗ (ನಮ್ಮ ಕ್ಯಾಲೆಂಡರ್) ನಮಗೆ ಸ್ವಾತಂತ್ರ್ಯ ಬಂದು 77 ವರ್ಷಗಳಾಯ್ತು. ಅದರಲ್ಲಿ 'ಸ್ವ' ದ ಬಗ್ಗೆ ನಾವು ನಮ್ಮ ಮುಂದಿನ ಪೀಳಿಗೆಗೆ ಅರಿವುಂಟು ಮಾಡಬಹುದಲ್ಲವೇ? 'ಸ್ವ' ಎಂದರೆ ನಮ್ಮತನ, ನಮ್ಮ ಪರಂಪರೆ, ನಮ್ಮ ಸಂಸ್ಕೃತಿ, ಇದರ ಬಗ್ಗೆ ತಿಳಿಸಿ ಕೊಡುವವರು ಯಾರು? ನಾವೇ ಅಲ್ಲವೇ? ನವ ಭಾರತದ ನಿರ್ಮಾಣ ಎಂದರೆ ಇದೇ ಅಲ್ಲವೇ? ಸ್ವಲ್ಪ ಯೋಚಿಸಿ.

●

- ನೀವು ಯಾವುದೇ ಕೆಲಸವನ್ನು ಮಾಡುವಾಗಲೂ ನಿಮ್ಮ ಮನಸ್ಸು ಹೃದಯ, ನಿಮ್ಮ ಸರ್ವಸ್ವವನ್ನೂ ಆ ಕೆಲಸಕ್ಕೆ ಕೊಡಿ.
- ಶಕ್ತಿಯೇ ಜೀವನ, ದುರ್ಬಲತೆಯೇ ಮರಣ; ಶಕ್ತಿಯೇ ಪರಮಾನಂದ, ಅಖಂಡಜೀವನ, ಅಮರತ್ವ. ದುರ್ಬಲತೆಯೇ ಅನವರತ ದುಃಖ, ತಳಮಳ, ದುರ್ಬಲತೆಯೇ ಮರಣ.
- ಶಿಕ್ಷಣವೆಂದರೆ ಮೊದಲೇ ಮನುಷ್ಯನಲ್ಲಿ ಇರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು. – ಸ್ವಾಮಿ ವಿವೇಕಾನಂದ

# ಪರೀಕ್ಷೆಗಳು ಮತ್ತು ನಾವು

ಚಿದಾನಂದ ಆ ಕೇಸ್ಕರ ಪಾಟೀಲ
ಎಂ.ಎ. ಇತಿಹಾಸ, ಎಂ.ಎ. ಸಮಾಜಶಾಸ್ತ್ರ.
ಎಂ.ಎಸ್ಸಿ. ಭೂಗೋಳಶಾಸ್ತ್ರ.
ಅಧ್ಯಾಪಕರು –– ಬೆಳಗಾವಿ.
9449114285, chidapatil@gmail.com



"ಶೈಕ್ಷಣಿಕ ಜೀವನದಲ್ಲಿ ಪರೀಕ್ಷೆಗಳೇ ಜೀವನ ಅಲ್ಲ. ಆದರೆ ಜೀವನ ರೂಪಿಸಿಕೊಳ್ಳುವಲ್ಲಿ ಪರೀಕ್ಷೆಗಳು ಮಹತ್ವದ್ದಾಗಿವೆ". ಎನ್ನುವುದು ಎಲ್ಲ ಸಾಧಕರನ್ನು ನೋಡಿದಾಗ ತಿಳಿಯುವ ಸತ್ಯವಾದ ಮಾತು. ಕರ್ನಾಟಕದಲ್ಲಿ ಇತ್ತೀಚಿನ ಎರಡು ಮೂರು ವರ್ಷಗಳಲ್ಲಿ ಪಿಯುಸಿ ದ್ವಿತೀಯ ವರ್ಷದ ಫಲಿತಾಂಶವನ್ನು ಗಮನಿಸಿದಾಗ ತಕ್ಕಮಟ್ಟಿಗೆ ನಿರಂತರತೆಯನ್ನು ಕಾಯ್ದುಕೊಂಡಿದೆ. ಆದರೆ ವಿದ್ಯಾರ್ಥಿ ಜೀವನದಲ್ಲಿ ಎದುರಿಸುವ ಮೊದಲ ಪಬ್ಲಿಕ್ ಪರೀಕ್ಷೆ ಎನಿಸಿಕೊಂಡಿರುವ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶವನ್ನು ಗಮನಿಸಿದಾಗ ಶೈಕ್ಷಣಿಕ ಚಿಂತಕರಿಗಂತು ಚಿಂತೆ ಮಾಡುವಂತೆ ಮಾಡಿತ್ತು. ಎಸ್‌ಎಸ್‌ಎಲ್‌ಸಿ ಪರೀಕ್ಷೆ ವಿದ್ಯಾರ್ಥಿ ಜೀವನದಲ್ಲಿ ಎಲ್ಲವು ಅಲ್ಲ. ಆದರೆ ಮುಂದೆ ಎಲ್ಲವನ್ನು ಪಡೆಯಲು ಮತ್ತು ಮುಂದಿನ ಆಯ್ಕೆಗಳಿಗೆ ದಾರಿ ತೋರಲು ಇದೊಂದು ಮಾರ್ಗಸೂಚಿಯಾಗಿರುವುದಂತೂ ಸತ್ಯ.

### ಪರೀಕ್ಷೆ ವಿದ್ಯಾರ್ಥಿ ಸ್ನೇಹಿ ಮಾಡುವಲ್ಲಿ ಒಂದು ಹೆಜ್ಜೆ

ಕರ್ನಾಟಕ ಶಿಕ್ಷಣ ಇಲಾಖೆ ಈ ಶೈಕ್ಷಣಿಕ ಸಾಲಿನಲ್ಲಿ ಪರೀಕ್ಷೆಗಳು ವಿದ್ಯಾರ್ಥಿ ಸ್ನೇಹಿಯಾಗಿ ರೂಪಿಸಲು ಮಾಡಿದ ಕಾರ್ಯಗಳು ಈ ಕೆಳಕಂಡಂತಿದೆ

- **ನೀಲನಕ್ಷೆ :–** ಮುಂಬರುವ ವಾರ್ಷಿಕ ಪರೀಕ್ಷೆಗಳು ಪಠ್ಯ ಪುಸ್ತಕದಲ್ಲಿಯ ಈ ಅಂಶಗಳಿಗೆ ಮಹತ್ವ ನೀಡಲಾಗುವುದು ಮತ್ತು ಸುಲಭ, ಸಾಧಾರಣ ಮತ್ತು ಕಠಿಣತೆಯ ಮಟ್ಟ ಹೀಗಿರುತ್ತದೆ ಎನ್ನುವ ನೀಲನಕ್ಷೆಯನ್ನು ಪರೀಕ್ಷೆಯ ಮುಂಚಿತವಾಗಿಯೇ ಬಿಡುಗಡೆ ಮಾಡಿರುವುದು ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶದತ್ತ ಹೆಜ್ಜೆ ದೃಢವಾಗಿ ಇಡಲು ಸಹಾಯಕವಾಗಿದೆ.
- **ಸರಿಯಾದ ದಿಕ್ಕಿನಲ್ಲಿ ಪರೀಕ್ಷಾ ತರಬೇತಿಗಳು:–** ಮಕ್ಕಳ ಬುದ್ಧಿಮಟ್ಟ ಒಂದೇ ರೀತಿಯಲ್ಲಿ ಇರುವುದಿಲ್ಲ. ವೈಯುಕ್ತಿಕ ಭಿನ್ನತೆ ಇರುತ್ತದೆ ಎನ್ನುವ ಸತ್ಯವನ್ನು ಅರಿತು ಕನಿಷ್ಠತಮ ಉತ್ತೀರ್ಣವಾಗಲು ಏನುಮಾಡಬೇಕು ಎನ್ನುವುದು ಈ ಬಾರಿಯ ರಾಜ್ಯದಲ್ಲಿ ಎಲ್ಲ ಭಾಗದಲ್ಲಿಯೂ ಪರೀಕ್ಷಾ ಪೂರ್ವ ತರಬೇತಿಗಳು ನಡೆದು ಉತ್ತೀರ್ಣದತ್ತ ಮುನ್ನಡೆಯಲು ಸಹಾಯವಾಗಿದೆ.
- ವಿದ್ಯಾರ್ಥಿಗಳನ್ನು ಪರೀಕ್ಷಾ ತಯಾರಿಯ ಮತ್ತು ಉತ್ತೀರ್ಣತೆಯ ಅಳತೆಗೋಲು ನಿರ್ಧರಿಸಲು ಅನೇಕ ವರ್ಷಗಳಿಂದ ಕೇಂದ್ರೀಯ ಪಠ್ಯಕ್ರಮ ಬೋಧನೆಯಲ್ಲಿ ಅನೇಕ ಅಂಶಗಳನ್ನು ಈ ವರ್ಷ ರಾಜ್ಯಪಠ್ಯಕ್ರಮ ಓದುವ ಮಕ್ಕಳಿಗೂ ಅನ್ವಿಸಿದ್ದು ಮಕ್ಕಳಿಗೆ ಪರೀಕ್ಷೆಗಳು ಸುಲಭವಾಗಲು ಮತ್ತು ಸರಿಯಾದ ದಿಕ್ಕಿನಲ್ಲಿ ಪರೀಕ್ಷೆ ತಯಾರಿ ಮಾಡಲು ಸಹಾಯಕವಾಗಬಹುದು.
- ತರಗತಿಯ ಕೋಣೆಯಲ್ಲಿ ಪರೀಕ್ಷಾ ತಯಾರಿಯ ದೃಷ್ಟಿಯಿಂದ ವಿದ್ಯಾರ್ಥಿಗಳನ್ನು ತಯಾರಿಮಾಡಲು ಈ ಶೈಕ್ಷಣಿಕ ಸಾಲಿನಲ್ಲಿ ಶಿಕ್ಷಕರಿಗೆ ಸ್ಪಷ್ಟ ನೀಲನಕ್ಷೆಯ ಮಾರ್ಗಸೂಚಿ ಇರುವುದರಿಂದಾಗಿ ಶಿಕ್ಷಕರಿಗೆ ಮಕ್ಕಳನ್ನು ತಯಾರಿಸುವ ಮಾರ್ಗದರ್ಶನ ತೋರಿದಂತಾಗುತ್ತದೆ.
- ಏನನ್ನು ಓದಬೇಕು? ಯಾವ ಅಂಶಗಳಿಗೆ ಹೆಚ್ಚು ಒತ್ತುಕೊಡಬೇಕು? ಹೆಚ್ಚು ಅಂಕಗಳನ್ನು ಗಳಿಸುವುದು ಹೇಗೆ? ಎನ್ನುವ ಅನೇಕ ಪ್ರಶ್ನೆಗಳು ಗೊಂದಲದಲ್ಲಿರುವ ಮಕ್ಕಳಿಗೆ ಈ ವರ್ಷದ ಪರೀಕ್ಷಾ ಸುಧಾರಣೆಯಲ್ಲಿಯ ಕ್ರಮಗಳು ದಾರಿ ತೋರಿವೆ ಮತ್ತು ವಿದ್ಯಾರ್ಥಿ ಸ್ನೇಹಿ ಪರೀಕ್ಷೆ ಎಂದು ರೂಪಿಸಲು ಸಹಾಯಕವಾಗಲಿವೆ ಎಂದು ಭಾವಿಸಲಾಗಿದೆ.
- ಮಕ್ಕಳ ಭವಿಷ್ಯದ ಬಗ್ಗೆ ಚಿಂತಿತರಾಗುವ ಪಾಲಕರು ಈ ವರ್ಷದಲ್ಲಿ ಪರೀಕ್ಷಾ ಕ್ರಮದಲ್ಲಿ ಆದ ಬದಲಾವಣೆ ಮತ್ತು ಯೋಜನೆಗಳು ಮಕ್ಕಳು ಹೆಚ್ಚು ಅಂಕಗಳನ್ನು ಪಡೆಯುವರು ಎನ್ನುವ ಭರವಸೆ ಮೂಡಬಹುದು ಎಂದುಕೊಳ್ಳಬಹುದಾಗಿದೆ.

ಪರೀಕ್ಷಾ ಫಲಿತಾಂಶ ಸುಧಾರಣೆಯತ್ತ ಏನೆಲ್ಲ ಕ್ರಮಗಳನ್ನು ಕೈಗೊಂಡಿದ್ದಾಗಲೂ ಅಷ್ಟೇ ತೀವ್ರತೆಯಲ್ಲಿ ಸವಾಲುಗಳೂ ಎದುರಿಗಿವೆ. ಸವಾಲುಗಳನ್ನು ಎದುರಿಸಲು ನಾವೆಲ್ಲ ಸಿದ್ಧರಾಗಬೇಕಾದ ಅವಶ್ಯಕತೆಯು ಇದ್ದೇ ಇದೆ.

### ಪರೀಕ್ಷೆಯ ತಯಾರಿಯಲ್ಲಿ ಎದುರಾಗುವ ಸವಾಲುಗಳು

- **ಜಾತ್ರೆಗಳು, ಹಬ್ಬಗಳು, ಮದುವೆಯಂತಹ ಕಾರ್ಯಕ್ರಮಗಳು :–** ಗ್ರಾಮೀಣ ಭಾಗದಲ್ಲಿ ಪರೀಕ್ಷೆಯ ತಯಾರಿಗೆ ಅಡ್ಡಲಾಗಿ ನಿಲ್ಲುವ ಜಾತ್ರೆಗಳು, ಹಬ್ಬಗಳು ಮತ್ತು ಮದುವೆಯಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಅಡಚಣೆಗಳಾಗಿವೆ. ಊರಲ್ಲಿ ನಡೆಯುವ ಜಾತ್ರೆ ಮತ್ತು ಹಬ್ಬಗಳು ಕನಿಷ್ಠ 15 ದಿನಗಳನ್ನು ವಿದ್ಯಾರ್ಥಿಯಿಂದ ಕಸಿದುಕೊಳ್ಳುತ್ತವೆ ಮತ್ತು ಅಧ್ಯಯನದಲ್ಲಿ ಹಿಂದೆ ತಳ್ಳುತ್ತವೆ. ಇವೆಲ್ಲವೂ ಸಹಜ ಮತ್ತು ಸಣ್ಣ ಅಂಶಗಳೆನಿಸಿದರು ಪರೀಕ್ಷಾ ತಯಾರಿಯಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತವೆ.
- **ಕೃಷಿ ಕಾರ್ಯಗಳು:–** ಬೇಸಿಗೆಯ ಪ್ರಾರಂಭದಲ್ಲಿ ಪರೀಕ್ಷೆಗಳು ಹತ್ತಿರವಾಗುವಂತಹ ದಿನಗಳಲ್ಲಿಯೇ ಕೃಷಿ ಫಸಲು ಕೈಕಟಾವು ಮತ್ತು ಮರುನಾಟಿಯ ಕಾರ್ಯಗಳು ಭರದಿಂದ ನಡೆಯುತ್ತಿರುವ ಕಾಲದಲ್ಲಿ ಹಳ್ಳಿಗಾಡಿನ ವಿದ್ಯಾರ್ಥಿಗಳ ಅಧ್ಯಯನದ ಹಿನ್ನಡೆಗೆ ಕಾರಣವಾಗಬಹುದು.
- **ಕ್ರಿಕೆಟ್ ಮತ್ತು ಆಕರ್ಷಣೆಗಳು:–** ಬೇಸಿಗೆ ಕ್ರಿಕೆಟ್ ನಂತಹ ಕ್ರೀಡಾ ಚಟುವಟಿಕೆಗಳು ಗರಿಗೆದರಲು ಸಹಾಯಕವಾಗಿವೆ. ಅದಲ್ಲದೆ ಆಧುನಿಕ ತಂತ್ರಜ್ಞಾನದ ಪ್ರಭಾವದಿಂದಾಗಿ ಬೇರೆಲ್ಲೋ ದೇಶದಲ್ಲಿ

ಪುಟ 9 ಕ್ಕೆ ➤

# ರಾಮಾಯಣದಲ್ಲಿನ ಸಾಂಸ್ಕೃತಿಕ ಮೌಲ್ಯಗಳು



**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**

ಆದಿಕಾವ್ಯ ರಾಮಾಯಣವು ಮೌಲ್ಯಗಳ ಭಂಡಾರ, ಆದರ್ಶಗಳ ಕಣಜ. ಮರ್ಯಾದಾ ಪುರುಷೋತ್ತಮನೆಂದು ಕರೆಯುವ ಶ್ರೀ ರಾಮಚಂದ್ರನ ವ್ಯಕ್ತಿತ್ವವು ಭಾರತೀಯ ಸಂಸ್ಕೃತಿಯ ಸಾಕಾರ ರೂಪವೇ ಎನಿಸಿದೆ. ಹಾಗಾಗಿ ರಾಮಾಯಣವು ನಮ್ಮ ದೇಶದ ಆತ್ಮವೇ ಎನ್ನಬಹುದು. 'ರಾಮ' ಎಂಬ ಶಬ್ದವು ಇಡೀ ದೇಶದ ಜನರನ್ನು ಒಂದೆಡೆಗೆ ಸೇರಿಸುವ ಐಕ್ಯತಾಮಂತ್ರವೆಂದರೂ ಸರಿ. ಅದು ಅತಿಶಯೋಕ್ತಿಯಾಗುವುದಿಲ್ಲ.ರಾಮನ ಕಾಲವಾದ ತ್ರೇತಾಯುಗವು ಕಳೆದು ಸಾವಿರಾರು ವರ್ಷಗಳೇ ಸಂದಿದ್ದರೂ ಅಲ್ಲಿನ ಪಾತ್ರಗಳು, ಘಟನೆಗಳು ಇಂದಿಗೂ ಜನಮಾನಸದಲ್ಲಿ ಆಳವಾಗಿ ಬೇರೂರಿವೆ. ಕಾರಣ ಅಲ್ಲಿ ದೊರೆಯುವ ಜೀವನಮೌಲ್ಯಗಳು ಸಾಂಸ್ಕೃತಿಕ ಮೌಲ್ಯಗಳೂ, ಸಾರ್ವಕಾಲಿಕ ಮೌಲ್ಯಗಳೂ ಆಗಿವೆ. ರಾಮಾಯಣ ಪಾರಾಯಣವನ್ನು ದೇಶದಾದ್ಯಂತ ಊರೂರುಗಳಲ್ಲಿ ಅಲ್ಲಿನ ಪ್ರಾದೇಶಿಕ ಭಾಷೆಗಳಲ್ಲಿ ಇವತ್ತಿಗೂ ನಡೆಸುತ್ತ ಬಂದಿರುವುದೂ, ಜನರು ಅದಕ್ಕೆ ಸ್ಪಂದಿಸುತ್ತಿರುವುದೂ ಅದರ ಸಾರ್ವಕಾಲಿಕತೆಗೆ ಮತ್ತು ಜನಮನ್ನಣೆಯನ್ನು ಹೊಂದಿರುವುದಕ್ಕೆ ಸಾಕ್ಷಿಯಾಗಿದೆ. ಶಿಷ್ಟ ಸಾಹಿತ್ಯದಲ್ಲಿ ಮಾತ್ರವಲ್ಲದೆ ಜನಪದ ಸಾಹಿತ್ಯದ ಪ್ರಕಾರಗಳಲ್ಲಿಯೂ ರಾಮಾಯಣದ ಕಥಾರಚನೆಗಳಾಗಿರುವುದು ದೇಶದ ಬಹುತೇಕ ಭಾಷೆಗಳಲ್ಲಿ ಕಂಡುಬರುತ್ತದೆ. ಅಲ್ಲಿ ನಿರೂಪಿತವಾಗಿರುವ ಸಾಂಸ್ಕೃತಿಕ ಮೌಲ್ಯಗಳು ಸಮಾಜದ ಎಲ್ಲ ವರ್ಗಗಳನ್ನು ಸುಸಂಸ್ಕೃತರನ್ನಾಗಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದುವು, ಅಷ್ಟೇ ಅಲ್ಲ, ಇಂದಿಗೂ ಆ ಕಾರ್ಯವು ಬೇರೆ ಬೇರೆ ಮಾಧ್ಯಮಗಳ ಮೂಲಕ ನಿರಂತರವಾಗಿ ನಡೆಯುತ್ತಲೇ ಬಂದಿದೆ.

ಹಿಂದೂಧರ್ಮದ ಪ್ರಕಾರ ಮನುಷ್ಯನು ಜನ್ಮತಳೆದ ಕೂಡಲೇ ಅವನು ನಿರ್ವಹಿಸಲೇಬೇಕಾದ ಐದು ಜವಾಬ್ದಾರಿಗಳು ಅವನ ಹೆಗಲೇರುತ್ತವೆ. ಅವು ಸಮಾಜ, ಪ್ರಕೃತಿ ಮತ್ತು ಹಿರಿಯರಿಂದ ಪಡೆದ ಉಪಕಾರಕ್ಕೆ ಪ್ರತಿಯಾಗಿ ತೀರಿಸಲೇಬೇಕಾದ ಹೊಣೆಗಾರಿಕೆಯಾಗಿರುತ್ತದೆ. ಅವು ದೇವ,ಪಿತೃ, ಋಷಿ, ಮನುಷ್ಯ ಮತ್ತು ಭೂತ ಋಣಗಳನ್ನು ಸಲ್ಲಿಸುವ ಕಾರ್ಯವಾಗಿರುತ್ತದೆ. ಇವು ನಮ್ಮ ಸಂಸ್ಕಾರದ ಮೂಲಭೂತ ಅಂಶಗಳೂ ಆಗಿವೆ.

1. **ದೇವಋಣ**ವೆಂದರೆ, ನಮ್ಮಲ್ಲಿ ಪರಂಪರಾಗತವಾಗಿ ಬೆಳೆದು ಬಂದಿರುವ ನಂಬಿಕೆಯ ಅನುಸಾರವಾಗಿ ಇಡೀ ಜಗತ್ತಿನ ಸೃಷ್ಟಿಯ ಕಾರಣಪುರುಷನಾದ ಭಗವಂತನ ಅಂದರೆ ನಮ್ಮೆಲ್ಲರ ಅಸ್ತಿತ್ವಕ್ಕೆ, ಜೀವಧಾರಣಕ್ಕೆ ಕಾರಣವಾದ ದೈವಶಕ್ತಿಯ ಋಣವನ್ನು ತೀರಿಸುವ ಸಲುವಾಗಿ ಪೂಜೆ, ಯಜ್ಞ ಮತ್ತು ಪ್ರಾರ್ಥನೆಯಂತಹ ಧಾರ್ಮಿಕ ಆಚರಣೆಗಳ ಮೂಲಕ ದೇವತೆಗಳಿಗೆ ಸಲ್ಲಿಸುವ ಕೃತಜ್ಞತೆ.

2. **ಪಿತೃಋಣ** ನಮ್ಮನ್ನು ಈ ಭೂಮಿಗೆ ತಂದ ಜನ್ಮದಾತರನ್ನು ಮತ್ತು ಹಿರಿಯರನ್ನು ಗೌರವಿಸುವುದು, ವಂಶವನ್ನು ಮುಂದುವರಿಸುವ ಸಲುವಾಗಿ ಸಂತಾನೋತ್ಪತ್ತಿಯನ್ನು ಹಾಗೂ ಶ್ರಾದ್ಧಕರ್ಮಗಳನ್ನು ನೆರವೇರಿಸುವ ಮೂಲಕ ಅವರ ಋಣವನ್ನು ತೀರಿಸುವುದು.

3. **ಋಷಿಋಣ.** ಜ್ಞಾನವನ್ನು ನೀಡಿ, ಶಾಸ್ತ್ರಾಚರಣೆಗಳ ವಿಧಿ, ನಿಯಮಗಳನ್ನು ಕಲಿಸುವ ಋಷಿಮುನಿಗಳಿಗೆ ನಾವು ಅಧ್ಯಯನ ಮಾಡುತ್ತ,, ಅಧ್ಯಾಪನವನ್ನೂ ಮಾಡುವುದರ ಮೂಲಕ ಪಡೆದ ಜ್ಞಾನದ ಪ್ರಸಾರವನ್ನು ಮಾಡುತ್ತ ಸಲ್ಲಿಸುವ ಗೌರವವಾಗಿರುತ್ತದೆ.

4. **ಮನುಷ್ಯಋಣ.** ಇದು ಸಮಾಜದ ಋಣವಾಗಿರುತ್ತದೆ. ಬದುಕನ್ನು ಸುಸೂತ್ರವಾಗಿ ನಡೆಸಲು ಸಹಕರಿಸುವ ಸುತ್ತಲಿನ ಜೀವಗಳಿಗೆ ತನ್ನಿಂದಾದಷ್ಟು ಉಪಕಾರವನ್ನು ಮಾಡುತ್ತ, ದಾನ, ಧರ್ಮಾಚರಣೆಗಳನ್ನು ಮಾಡುತ್ತ ಅವರಿಗೆ ಸಲ್ಲಿಸುವ ಕೃತಜ್ಞತೆಯಾಗಿರುತ್ತದೆ.

5. **ಭೂತಋಣ.** ಎಲ್ಲ ಪ್ರಾಣಿಗಳಲ್ಲಿ, ತನ್ನ ಬದುಕಿನ ಅವಿಭಾಜ್ಯ ಅಂಗವಾದ ಪ್ರಕೃತಿಯಲ್ಲಿ ಪ್ರೀತಿಯನ್ನು ಬೆಳೆಸಿಕೊಂಡು ಅವುಗಳನ್ನು ಸಂರಕ್ಷಿಸುವ ಕಾರ್ಯದಲ್ಲಿ ಭಾಗಿಯಾಗುತ್ತ ಸಾಮರಸ್ಯದ ಜೀವನವನ್ನು ನಡೆಸುವುದು.

ಇವೆಲ್ಲವೂ ಸಾಂಸ್ಕೃತಿಕ ಮೌಲ್ಯಗಳು. ಜೀವಿಗೆ ಸಂಸ್ಕಾರವನ್ನು ಕಲಿಸುವ ಅಂಶಗಳು. ಇದೇ ಸಮಾಜಜೀವಿಯಾದ ಮಾನವನು ಪಾಲಿಸಲೇಬೇಕಾದ ಸಾಮಾಜಿಕ ಮೌಲ್ಯಗಳೂ ಆಗಿವೆ. ರಾಮಾಯಣದ ಪಾತ್ರಗಳನ್ನು ಗಮನಿಸಿದಾಗ ಎಲ್ಲವನ್ನು ನಿಭಾಯಿಸಿರುವ ಹಲವಾರು ನಿದರ್ಶನಗಳನ್ನು ಕಾಣುತ್ತೇವೆ. ಶ್ರೀರಾಮನು ಪಿತೃವಾಕ್ಯಪರಿಪಾಲಕನಾಗಿ ವನವಾಸವನ್ನು ಕೈಗೊಂಡದ್ದು, ಕೌಸಲ್ಯೆ, ಸುಮಿತ್ರೆಯರು ತಮ್ಮ ಮಕ್ಕಳನ್ನು ವಂಶದ ಹಿರಿಮೆಯನ್ನು, ಗೌರವವನ್ನು ರಕ್ಷಿಸಲು ಮಾತೃಹೃದಯದ ನೋವನ್ನೂ ಗೌಣವಾಗಿಸಿ ದುಃಖವನ್ನು ಭರಿಸುವ ಸಹನೆಯನ್ನು ತೋರಿದ್ದು, ಕಿರಿಯ ಸೋದರರಾದ ಭರತ, ಲಕ್ಷ್ಮಣ ಶತ್ರುಘ್ನರು ಯಾವುದೇ ಐಹಿಕ ಸುಖದ ಆಮಿಷಕ್ಕೆ ಲೋಭಕ್ಕೆ ಒಳಗಾಗದೆ ಹಿರಿಯನಾದ ಅಣ್ಣನ ದಾರಿಯಲ್ಲಿಯೇ ನಡೆದು ಧರ್ಮಸಂಸ್ಥಾಪನೆಯಲ್ಲಿ ಕೈಜೋಡಿಸಿದ್ದು, ಶ್ರೀರಾಮನ ಪತ್ನಿಯಾದ ಸೀತಾದೇವಿಯು ತನ್ನ ಪತಿವ್ರತಾಧರ್ಮವನ್ನು ನಿಭಾಯಿಸಿದ್ದು–ಇವೆಲ್ಲವೂ ಒಂದು ಕುಟುಂಬದ ಸದಸ್ಯರ ನಡವಳಿಕೆಯಾದರೆ ಮತ್ತೊಂದು ಕಡೆ ಕಾಣುವ ಸಾಂಸ್ಕೃತಿಕ ಮೌಲ್ಯಗಳು ಅಂದಿನ ಆದರ್ಶ ಸಮಾಜದ ಹಲವು ಮುಖಗಳನ್ನು ಪರಿಚಯಿಸುತ್ತವೆ. ಕುಟುಂಬದಲ್ಲಿ ಸಾಮರಸ್ಯವನ್ನು ಉಳಿಸಿ, ವಂಶದ ಘನತೆಯನ್ನು ಕಾಪಾಡಿಕೊಳ್ಳುವಷ್ಟೇ ಬದ್ಧತೆಯು ಒಂದು ನಾಡಿನ

**ಪುಟ 10 ಕ್ಕೆ ➤**

# INDIA'S PRIDE Dr. SANDHYA SHENOY

# ಕಸದಿಂದ ರಸ – ಆವಿಷ್ಕರಿಸಿದ ಮಹಿಳಾ ವಿಜ್ಞಾನಿ– ಡಾ॥ ಸಂಧ್ಯಾ ಶೆಣ್ಯೈ ಬಿ.ಎಸ್

**ಆರ್. ಸೀತಾಲಕ್ಷ್ಮಿ**
**ಮಾರ್ಗದರ್ಶಕರು,**
**ಕರ್ನಾಟಕ ರಾಜ್ಯ ಮಾಧ್ಯಮಿಕ**
**ಶಿಕ್ಷಕ ಸಂಘ**



**Dream, Dream Dream!**
**Convert the dream into thoughts**

- Abdul Kalam

ಈ ಹೇಳಿಕೆಯನ್ನು ಸಾಕಾರರೂಪಕ್ಕೆ ತಂದ ಮಹಿಳಾ ವಿಜ್ಞಾನಿ ಡಾ॥ ಸಂಧ್ಯಾಶೆಣ್ಯೈ. ತ್ಯಾಗ, ಪರಿಶ್ರಮ ಮತ್ತು ಸತತ ಸಾಧನೆಗಳಿಂದ ಶಕ್ತಿಯು ಪರಿವರ್ತನೆಯು ಕನಸನ್ನು ನನಸಾಗಿಸಿದ್ದಾರೆ. 3 ವರ್ಷಗಳು ಸತತವಾಗಿ ಜಗತ್ತಿನ ಶ್ರೇಷ್ಠ ವಿಜ್ಞಾನಿಗಳ ಪಟ್ಟಿಯ 2ನೇ ಸ್ಥಾನದಲ್ಲಿ ಹೆಸರು ಪಡೆಯುವುದು ಸುಲಭಸಾಧ್ಯ ವಿಷಯವೇನಲ್ಲ. ಮುಂದಿನ ಪೀಳಿಗೆಗೆ ಜೀವನದ ಸವಾಲುಗಳನ್ನೇ ತಮಗೊದಗಿದ ಅವಕಾಶವೆಂದು ಪರಿಗಣಿಸಿ ಆಸಕ್ತಿಯನ್ನೇ ಸಂಶೋಧನೆಯನ್ನಾಗಿ ಮಾಡಿಕೊಳ್ಳ ಬಹುದೆಂದು ತೋರಿಸಿ ದಾರ್ಶನಿಕಳಾಗಿರುವ ಡಾ॥ ಸಂಧ್ಯಾ ಶೆಣ್ಯೈರವರಿಗೆ ಅಭಿನಂದಿಸುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ. ಅವರ ಈ ಸಾಧನೆ "ನಷ್ಟವಾಗುವ ಶಾಖ (Wasted heat) ವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡರೆ ಅದು ಪರಿಶುದ್ಧ (clean) ಶಕ್ತಿಯ ಪ್ರಮುಖ ಮೂಲವಾಗುತ್ತದೆ" ಎನ್ನುವುದರಲ್ಲಿ ಸಂಶಯವೇ ಇಲ್ಲ. ಡಾ॥ ಬಿ.ಎಸ್ ಸಂಧ್ಯಾ ಶೆಣ್ಯೈರವರು ಮಂಗಳೂರಿನ ವಿಶ್ವವಿದ್ಯಾಲಯದಲ್ಲಿ ಜೀವಶಾಸ್ತ್ರ, ಸಸ್ಯಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಷಯದಲ್ಲಿ ಪದವಿ ಪಡೆದ ನಂತರ National institute of Karnataka ದಲ್ಲಿ ರಸಾಯನಶಾಸ್ತ್ರದಲ್ಲಿ ಮಾಸ್ಟರ್ಸ್ ಪದವಿಯನ್ನು ಪಡೆದಿದ್ದಾರೆ. ಪುನಃ 2013ರಲ್ಲಿ Chemistry and Material Science ವಿಷಯದಲ್ಲಿ Ph.D ಪದವಿ ಪಡೆದಿದ್ದಾರೆ Jawaharlal Nehru Centre for advanced Scientific research ಸಂಸ್ಥೆಯಲ್ಲಿ ಸೈದ್ಧಾಂತಿಕ ವಿಜ್ಞಾನ (Theoretical Science) ಘಟಕದಲ್ಲಿ ಸಹಾಯಕ ಸಂಶೋಧಕಿಯಾಗಿ ಸೇವೆ ಸಲ್ಲಿಸಿದ್ದಾರೆ. ತಾಪಮಾನ ವ್ಯತ್ಯಾಸವನ್ನು ನೇರವಾಗಿ ವಿದ್ಯುತ್‌ಶಕ್ತಿಯನ್ನಾಗಿ ಪರಿವರ್ತಿಸುವ ಸಾಮರ್ಥ್ಯವಿರುವ ವಿಶೇಷ ವಸ್ತುಗಳಿವೆ. ಇದನ್ನು ವ್ಯರ್ಥವಾಗುವ (Thermo electric material) ಶಾಖವನ್ನು ಉಪಯುಕ್ತ ವಿದ್ಯುತ್ ಆಗಿ ಪರಿವರ್ತಿಸಲು ಬಳಸಲಾಗುತ್ತದೆ. (ಉದಾ:- ಬಿಸ್ಮತ್ ಟೆಲ್ಲುರೈಡ್ (Bi2, Te3) ಮತ್ತು ಸಿಲಿಕಾನ್ ಆಧಾರಿತ ವಸ್ತುಗಳು) ಈ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ (Energy harvesting technology) ಶಕ್ತಿಕೊಯ್ಲು ತಂತ್ರಜ್ಞಾನ, ನ್ಯಾನೋ ತಂತ್ರಜ್ಞಾನ (Nano Technology) ಇವುಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿ ಜಗತ್ತಿಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ.



ಪ್ರಸ್ತುತ ಶ್ರೀಮತಿ ಸಂಧ್ಯಾ ಶೆಣ್ಯೈರವರು ಮಂಗಳೂರಿನ ಶ್ರೀನಿವಾಸ ಯೂನಿವರ್ಸಿಟಿಯ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಟೆಕ್ನಾಲಜಿಯಲ್ಲಿ ಪ್ರೊಫೆಸರ್ ಹಾಗೂ ಪ್ರಧಾನ ಸಂಶೋಧಕ ವಿಜ್ಞಾನಿಯಾಗಿದ್ದಾರೆ. "ಸುಸ್ಥಿರ ಶಕ್ತಿ ಮತ್ತು ವಸ್ತು ಸಂಶೋಧನೆ" ಈ ವಿಷಯದಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮನ್ನಣೆ ಪಡೆದಿರುವ ಹೆಗ್ಗಳಿಕೆ ಇವರದು. (Material Chemistry and innovation) ವಸ್ತು ರಸಾಯನಶಾಸ್ತ್ರ ಮತ್ತು ಸಂಶೋಧನೆಗೆ ಆಕೆಯ ಕೊಡುಗೆಗಾಗಿ ಆಕೆಗೆ 2025ರಲ್ಲಿ CRS ಬೆಳ್ಳಿ ಬಹುಮಾನ (CRS Silver award) ಬಂದಿದೆ.

ತ್ಯಾಜ್ಯ ಶಾಖವನ್ನು ಕೈಗಾರಿಕಾ ವಲಯದಲ್ಲಿ, ವಾಹನಗಳಲ್ಲಿ, ವಿದ್ಯುತ್‌ಸ್ಥಾವರಗಳಲ್ಲಿ, ಥರ್ಮೋ ಎಲೆಕ್ಟ್ರಿಕ್ ಸಾಧನಗಳಲ್ಲಿ ಉಪಯೋಗಿಸಲು ಅವರ ಸಂಶೋಧನೆಯ ಫಲವೇ ಕಾರಣ.

ಈ ವಿಷಯಕ್ಕೆ ಸಂಬಂಧಿಸಿದಂತೆ 67 ಪ್ರಕಟಣೆಗಳನ್ನು, ಸಾವಿರಾರು ಉಲ್ಲೇಖಗಳನ್ನೂ ಸಹ ನೀಡಿದ್ದಾರೆ. ಶುದ್ಧ ರಸಾಯನಶಾಸ್ತ್ರ ಮತ್ತು ವಸ್ತು ಶಕ್ತಿ ಇವುಗಳ ನಡುವಿನ ಸಂಬಂಧ ಹಾಗೂ ಅದರ ಅಳವಡಿಕೆಯನ್ನು ಮಾಡುವಂತಹ ಕ್ಲಿಷ್ಟಕರ ಯೋಜನೆಗಳನ್ನು ತಮ್ಮ ನಾಯಕತ್ವದಲ್ಲಿ ನಿರ್ವಹಿಸಿದ್ದಾರೆ.

ಸಿದ್ಧಾಂತ, ಪ್ರಯೋಗ ಹಾಗೂ ಸೂಕ್ತ ಮಾರ್ಗದರ್ಶನದ ಮೂಲಕ

**ಪುಟ 10 ಕ್ಕೆ** ➤

**ಅರ್ಧ ಜ್ಞಾನವು ಅಪಾಯ.**

# ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳ ಮಾನಸಿಕ ಒತ್ತಡ ನಿರ್ವಹಣೆ

**ಶ್ರೀಮತಿ ಲಕ್ಷ್ಮೀಸಿಂಗ್ ಬಿ.**
**ಶೈಕ್ಷಣಿಕ ಸಮಾಲೋಚಕರು, ಲೈಫ್‌ಕೋಚ್**
**ಸಂಪನ್ಮೂಲ ವ್ಯಕ್ತಿ (ಗಣಿತ), ಗಂಗಾನಗರ,**
**ಬೆಂಗಳೂರು –560 032**
**ದೂರವಾಣಿ ಸಂಖ್ಯೆ: 9980033636**



ಪ್ರಸಕ್ತ ದಿನಗಳವರೆಗೂ ಜನರ, ಅದರಲ್ಲೂ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚಾಗಿ ಯಾರೂ ಯೋಚಿಸುತ್ತಿರಲಿಲ್ಲ. ಮಕ್ಕಳು ಆಟಪಾಠಗಳೊಂದಿಗೆ ನಲಿಯುತ್ತಾ, ಕಲಿಯುತ್ತಾ ಒತ್ತಡಗಳ ಜಂಜಾಟವಿಲ್ಲದೆ ಆರೋಗ್ಯಕರ ಜೀವನದೊಂದಿಗೆ ಬೆಳೆಯುತ್ತಿದ್ದರು. ವರುಷಗಳ ಹಿಂದೆ 'ಕರೋನಾ' ಎಂಬ ಮಹಾಮಾರಿ ಒಕ್ಕರಿಸಿ ಜನ ಜೀವನವನ್ನು ಅದರಲ್ಲೂ ವಿದ್ಯಾರ್ಥಿಗಳ ಭವಿಷ್ಯವನ್ನು ಆತಂಕದತ್ತ ದೂಡಿತು. ಪರಿಸ್ಥಿತಿ ಬಿಗಡಾಯಿಸಿ, ಮೊಬೈಲ್ ನಿಷೇಧ ಹೇರಿದ್ದ ಶಾಲಾ ಕಾಲೇಜುಗಳು, ಮಕ್ಕಳು ಶಿಕ್ಷಣದಿಂದ ಸಂಪೂರ್ಣ ವಿಮುಖರಾಗದಂತೆ ನೋಡಿಕೊಳ್ಳಲು 'ಆನ್‌ಲೈನ್ ಶಿಕ್ಷಣ' ದ ಪರಿಚಯ ಮಾಡಿಸಿ ಶಾಲೆಯೇ ಮೊಬೈಲ್ ಒಳಗಡೆ ಬರುವಂತೆ ಆಯಿತು. ಕರೋನಾದ ಮುಂಚೆಯೂ ಮೊಬೈಲ್, ಅಂತರ್ಜಾಲಗಳ ಪರಿಚಯ ಮಕ್ಕಳಿಗಿತ್ತು, ಆದರೆ ಅನಿವಾರ್ಯವಾಗಿರಲಿಲ್ಲ. ಈಗಂತೂ ಅಂತರ್ಜಾಲವಿಲ್ಲದೆ ಜೀವನ ಸಾಗುವುದೇ ಇಲ್ಲ ಎಂಬಂತಾಗಿದೆ.

ಯಾವುದೇ ಶಿಕ್ಷಣದ ಮೂಲ ಉದ್ದೇಶ ವಿದ್ಯಾರ್ಥಿಗಳ ಆಲೋಚನಾ ಸಾಮರ್ಥ್ಯ ಹೆಚ್ಚಿಸುವುದು. ಆದರೆ ಆನ್‌ಲೈನ್ ಶಿಕ್ಷಣದಿಂದ ಮೊದಲಿಗೆ ಕೊಡಲಿ ಏಟು ಬಿದ್ದಿರುವುದೇ ವಿದ್ಯಾರ್ಥಿಗಳ ಆಲೋಚನಾ ಶಕ್ತಿಗೆ . ಕರೋನಾ ಭೀತಿಯಿಂದ ಮತ್ತು ಲಾಕ್‌ಡೌನ್ ನಿಯಮಗಳಿಂದ ಮಕ್ಕಳು ಎಲ್ಲರ ಜೊತೆ ಬೆರೆತು ಕಲಿಯುವ ಅಭ್ಯಾಸ ನಿಂತು ಹೋಗಿ, ನಾಲ್ಕು ಗೋಡೆಗಳ ಮಧ್ಯೆ ಒಬ್ಬಂಟಿಯಾಗಿ ಕಲಿಯುವ ಪರಿಸ್ಥಿತಿ ಬಂದು ವಿದ್ಯಾರ್ಥಿಗಳ ಆರೋಗ್ಯಕರ ಬೆಳವಣಿಗೆ ನಿಲ್ಲುವಂತಾಗಿದೆ. ಮೊದಲ ಬಾರಿಗೆ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಬಗ್ಗೆ ಎಲ್ಲರೂ ಬಹು ಗಂಭೀರದಿಂದ ಚಿಂತಿಸುವಂತಾಗಿದೆ. ಈ ವೈರಸ್ಸಿನಿಂದ ದೈಹಿಕ ನೋವುಗಳ ಜೊತೆಗೆ ಮನಸ್ಸುಗಳು, ಆಘಾತಗಳಿಂದ ಸಂಪೂರ್ಣ ಜರ್ಜರಿತಗೊಂಡಿದೆ.

ಆ ಎರಡು ವರ್ಷಗಳಲ್ಲಿ ಬಹುತೇಕ ನಾಲ್ಕು ಗೋಡೆಗಳ ಮಧ್ಯೆಯೇ ಜೀವನ ಕಳೆದ ವಿದ್ಯಾರ್ಥಿಗಳಿಗೆ ಅತಿಯಾದ ಮಾನಸಿಕ ಒತ್ತಡ ಉಂಟಾಗಿ ಮಾನಸಿಕ ಖಿನ್ನತೆ ಎಂಬ ಸಾಂಕ್ರಾಮಿಕ ರೋಗ ಅತಿವೇಗವಾಗಿ ಹರಡತೊಡಗಿ ಅವರ ಜೀವನ ಹಳಿ ತಪ್ಪಿದೆ.

ಇಂದಿನ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ಕೊರತೆಯಿಂದ ನಕಾರಾತ್ಮಕ ಚಿಂತನೆಗಳು ಹೆಚ್ಚಾಗಿ, ಏಕಾಗ್ರತೆ ಕಳೆದುಕೊಂಡು ಒಂದು ರೀತಿಯ ಫಸ್ಟ್ರೇಷನ್, ಸುಸ್ತು ಮತ್ತು ತಳಮಳ ಹೆಚ್ಚಾದಂತೆ ಕಾಣತೊಡಗಿದೆ. ವರ್ಚುವಲ್ ಪ್ರಪಂಚಕ್ಕೆ ಕಾಲಿಟ್ಟು, ತಮ್ಮ ಬಾಲ್ಯಾವಸ್ಥೆಯನ್ನು ಕಳೆದುಕೊಂಡು ಅಂತರ್ಮುಖಿಗಳಾಗಿದ್ದಾರೆ. ಅತಿ ಸುಲಭವಾಗಿ ಮಾಹಿತಿಗಳನ್ನು ಅಂತರ್ಜಾಲದಲ್ಲಿ ಸಂಗ್ರಹಿಸುವ ಅಭ್ಯಾಸ ಬೆಳೆದು, ಸ್ವಂತವಾಗಿ ಯೋಚಿಸುವ, ಸ್ವಂತಬುದ್ಧಿ ಉಪಯೋಗಿಸುವ ಸಾಮರ್ಥ್ಯ ಕುಂದಿ ಮಾನಸಿಕ ಒತ್ತಡಗಳಿಂದ ನರಳುತ್ತಿದ್ದಾರೆ. ಜೀವನವನ್ನು ನರಕವನ್ನಾಗಿ ಮಾಡಿಕೊಂಡಿದ್ದಾರೆ ಎಂದರೆ ತಪ್ಪಿಲ್ಲ.

ವಿದ್ಯಾರ್ಥಿಗಳ ಅಥವಾ ಮಕ್ಕಳ ಒತ್ತಡಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ಅಥವಾ ಒತ್ತಡಗಳಿಂದ ಹೊರಬರುವ ರೀತಿ, ನೀತಿಗಳನ್ನು ಕಲಿಸುವ ಜವಾಬ್ದಾರಿ ಪೋಷಕರಿಗಿಂತಲೂ ಹೆಚ್ಚು ಸಮಯವನ್ನು ವಿದ್ಯಾರ್ಥಿಗಳ ಜೊತೆ ಕಳೆಯುವ ಶಿಕ್ಷಕರ ಮೇಲಿದೆ ಎಂಬುದು ಸತ್ಯ. ಈ ನಿಟ್ಟಿನಲ್ಲಿ ಶಿಕ್ಷಕರು ನೀಡಬಹುದಾದ ಕೆಲವೊಂದು ಸಕಾರಾತ್ಮಕ ಮಾರ್ಗದರ್ಶನಗಳು ಹೀಗಿವೆ.

- ಶಿಕ್ಷಕರು ವಿದ್ಯಾರ್ಥಿಗಳಿಗೆ ಒಳ್ಳೆಯ ಮತ್ತು ಕೆಟ್ಟದರ ಅರಿವು ಮೂಡಿಸಿ, ಮನಸ್ಸನ್ನು ಹೇಗೆ ಹಿತಕರವಾಗಿಟ್ಟುಕೊಳ್ಳಬೇಕು ಮತ್ತು ಸಮತೋಲನದ ಜೀವನ ನಿರ್ವಹಣೆಯ ಆಲೋಚನೆ ಮಾಡಲು ಪ್ರೇರೇಪಿಸಿ ಅದರ ಮಾರ್ಗದರ್ಶನ ನೀಡಬೇಕು.
- ವಿದ್ಯಾರ್ಥಿಗಳ ಕನಸಿಗೆ ಬೇಲಿ ಹಾಕದೆ, ಸ್ವತಂತ್ರ್ಯವಾಗಿ ಸಕಾರಾತ್ಮಕವಾಗಿ ಹರಿಯಲು ಬಿಟ್ಟು ಅವರ ಪ್ರಯತ್ನಗಳಿಗೆ ಅವರ ಕುತೂಹಲಗಳಿಗೆ ಜೊತೆಯಾಗಿ ಸ್ಪಂದಿಸಿ, ಕೇವಲ ಗುರಿಯನ್ನು ತೋರುವ ಗುರುಗಳಾಗದೇ ವಿದ್ಯಾರ್ಥಿಗಳ ನಿಜವಾದ ಆಪ್ತ ಸ್ನೇಹಿತ, ಹಿತೈಷಿ ಮತ್ತು ಬಂಧುವಾಗಿ, ಯಾವುದೇ ಸಂಕೋಚವಿಲ್ಲದೆ, ಹಿಂಜರಿತನವಿಲ್ಲದೆ ನೆರವು ಪಡೆದು ತಮ್ಮ ಸಾಧನೆಯತ್ತ ಪ್ರಯತ್ನ ಪಡುವುದಕ್ಕೆ ನೆರವು ನೀಡಬೇಕು.
- ಪ್ರಯತ್ನಶೀಲರಿಗೆ ಅಸಾಧ್ಯವಾದುದು ಯಾವುದು ಇಲ್ಲ. ವಿನಯಶಾಲಿಯೋ ವಿಜಯಶಾಲಿ ಎಂಬ ಅರಿವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕು. ಯೋಜಿತ ಬದುಕಿನಿಂದ ಏನಾದರು ಸಾಧಿಸಬಹುದು ಎಂಬ ಆಲೋಚನೆಯನ್ನು ವಿದ್ಯಾರ್ಥಿಗಳಲ್ಲಿ ಹುಟ್ಟು ಹಾಕುವ ಕೆಲಸ ಇಂದಿನ ಶಿಕ್ಷಣದ ಮೂಲ ಧ್ಯೇಯವಾಗಬೇಕು.
- ಜೀವನವೆಂದರೆ ಕೇವಲ ಪರೀಕ್ಷೆಯಲ್ಲಿ ಗಳಿಸುವ ಅಂಕಗಳಲ್ಲಿ ಎಂಬುದನ್ನು ಮನಗಣಿಸದೆ, ಎಲ್ಲಾ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅದಕ್ಕೆ ತಕ್ಕದಾದ ವಾತಾವರಣ ನಿರ್ಮಿಸಿ ಅವರ ಆಲೋಚನೆಗಳನ್ನು ಅನಾವರಣಗೊಳಿಸಿದರೆ ಖಂಡಿತ ಯಾವ ವಿದ್ಯಾರ್ಥಿಯೂ ಮಾನಸಿಕ ಖಿನ್ನತೆಗೆ ಒಳಗಾಗುವುದಿಲ್ಲ.
- ಜಾಲತಾಣಗಳು ಅವರ ಪ್ರಪಂಚವಲ್ಲ, ಪಠ್ಯಪುಸ್ತಕದ ಹೊರತಾದ ಉತ್ತಮ ಪುಸ್ತಕಗಳನ್ನು ಓದುವುದರಿಂದ ಅವರ ತಾರ್ಕಿಕ ಶಕ್ತಿ

ಪುಟ 9 ಕ್ಕೆ ➤

➢ ಪುಟ 8 ರಿಂದ.....

ಹೆಚ್ಚಾಗಿ ಅವರದೇ ಆದ ವ್ಯಕ್ತಿತ್ವವನ್ನು ರೂಢಿಸಿಕೊಳ್ಳಬಹುದು ಮತ್ತು ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು ಸುಲಭ ಎಂಬುದರ ಅರಿವು ಮೂಡಿಸಿ, ಒಳ್ಳೆಯ ಹವ್ಯಾಸಗಳನ್ನು ಬೆಳೆಸಬಹುದು.

- ಸಂಯಮದಿಂದ, ಪ್ರೀತಿ ಅಕ್ಕರೆಯಿಂದ ವಿದ್ಯಾರ್ಥಿಗಳನ್ನು ತಿದ್ದಿ ಅವರನ್ನು ಸರಿದಾರಿಗೆ ತರಬಹುದು. ಮಾನಸಿಕ ಆರೋಗ್ಯದ ಬೆಳವಣಿಗೆಗೆ ಮುಖ್ಯವಾಗಿ ಜವಾಬ್ದಾರಿಯ ಜೊತೆಗೆ ಕಾಳಜಿ, ತಾಳ್ಮೆ ಇರಬೇಕು ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಶಿಕ್ಷಕರ ಮಾರ್ಗದರ್ಶನದ ಜೊತೆಗೆ ವಿದ್ಯಾರ್ಥಿಗಳು ಕೂಡ ಮಾನಸಿಕ ಒತ್ತಡದ ನಿರ್ವಹಣೆಗೆ ಪಾಲಿಸಬೇಕಾದ ಕೆಲವು ಸಲಹೆ ಸೂಚನೆಗಳು ಹೀಗಿವೆ.

1. ಕಲಿಕೆ ನಿರಂತರ ಪ್ರಕ್ರಿಯೆ  ಹೊಸದಾದ ವಿದ್ಯೆಗಳನ್ನು ಕಲಿತು ಕೌಶಲ್ಯವರ್ಧನೆ ಮಾಡಿಕೊಂಡಾಗ ಪ್ರಗತಿ ಸಾಧ್ಯ. ಆಗಾಗ್ಗೆ ಮನಸ್ಸಿಗೆ ಮುದ ನೀಡುವಂತ ಹವ್ಯಾಸ ಬೆಳೆಸಿಕೊಂಡಾಗ ಮಾನಸಿಕ ಸುಸ್ತು ಮಾಯವಾಗುತ್ತದೆ.
2. ಗುರುಗಳ ಜೊತೆ, ಸ್ನೇಹಿತರ ಜೊತೆ ಮತ್ತು ಪೋಷಕರ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದರೆ ಅವರೆಲ್ಲರ ನಿರಂತರ ಪ್ರೋತ್ಸಾಹ ಮತ್ತು ಮಾರ್ಗದರ್ಶನ ಸಿಗುವುದು. ಇದರಿಂದ ವೈಫಲ್ಯಗಳನ್ನು ಮೆಟ್ಟಿ ಸಾಫಲ್ಯದತ್ತ ನಡೆಯುವ ತಾಕತ್ತು ಬೆಳೆಯುವುದು.
3. ಶಿಸ್ತು ಬಹುಮುಖ್ಯ. ಮಾನಸಿಕ ಶಿಸ್ತಿಗೆ ಆರೋಗ್ಯಕರ ಹವ್ಯಾಸ, ಸವಿರುಚಿಯ ಚಿಂತನೆ, ಧ್ಯಾನ ಬೇರೆಯವರಿಗೆ ಸಹಾಯ ಮಾಡುವ ಗುಣಗಳು ಇದ್ದರೆ ಒತ್ತಡ ಖಂಡಿತಾ ಕಡಿಮೆಯಾಗುತ್ತದೆ.
4. ನಮ್ಮ ಕನಸುಗಳು, ನಮ್ಮ ಸಾಮರ್ಥ್ಯಗಳು ನಮ್ಮ ಅಮೂಲ್ಯ ಆಸ್ತಿ, ಸೃಜನಶೀಲತೆ ನಮ್ಮ ಶಕ್ತಿ ಟೀಕೆ, ನಿರಾಶೆಗಳನ್ನು ಸಮರ್ಥವಾಗಿ ಎದುರಿಸಿ ಭಾವನೆಗಳನ್ನು, ಸರಿಯಾದ ರೀತಿಯಲ್ಲಿ ನಿರ್ವಹಿಸಿದರೆ ಮನಸ್ಸು ಕೆಡವುದಿಲ್ಲ. ಇತರರ ಸಲಹೆ ಸೂಚನೆಗಳನ್ನು, ಅಭಿಪ್ರಾಯವನ್ನು ಗೌರವಿಸಿ, ತಪ್ಪನ್ನು ತಿದ್ದಿಕೊಳ್ಳುವ ಪರಿಪಾಠ ಬೆಳೆಸಿಕೊಂಡರೆ, ಮನಸ್ಸಿನ ಸ್ವಾಸ್ಥ್ಯ ಚೆನ್ನಾಗಿರುವುದು.
5. 'ಈಸಬೇಕು ಇದ್ದು ಜಯಿಸಬೇಕು' ಎಂಬ ಮಾತು ನೆನಪಿರಲಿ, ಬದುಕಿದ್ದರೆ ದಾರಿ ಕಾಣುವುದು. ಒತ್ತಡಗಳಿಂದ ಆತ್ಮಹತ್ಯೆಯಂಥ ಯೋಚನೆ ಮಾಡದೆ ನಂಬಿಕೆಯಿಂದ ಜೀವನದಲ್ಲಿ ಮುನ್ನುಗ್ಗಬೇಕು.

ಒಟ್ಟಿನಲ್ಲಿ "ಬದುಕಿದ್ದರೆ ಬದುಕು ಇದ್ದೇ ಇರುವುದು" ಇದನ್ನು ಒಪ್ಪಿಕೊಳ್ಳಬೇಕು. ಸಮಯಪಾಲನೆ, ಕರ್ತವ್ಯ ನಿಷ್ಠೆ ಬಹುಮುಖ್ಯ. ನಮ್ಮ ವ್ಯಕ್ತಿತ್ವ ಅರ್ಥಮಾಡಿಕೊಂಡರೆ ನಮ್ಮ ನಿಜವಾದ ಶಕ್ತಿ ಹೊರಹೊಮ್ಮುವುದು. ಕನಸು ಕಾಣುವುದು ಬಹುಮುಖ್ಯ. ಹುಟ್ಟು, ಸಾವು ನಮ್ಮ ಕೈಯಲ್ಲಿಲ್ಲ. ಆದರೆ ಜೀವನ ರೂಢಿಸಿಕೊಳ್ಳುವ ಅವಕಾಶ ನಮ್ಮ ಕೈಯಲ್ಲಿದೆ. ಅದರ ಕನಸು ಕಾಣುವುದು ಮತ್ತು ಅದರತ್ತ ಸಾಗುವುದು. ವಿದ್ಯಾರ್ಥಿಗಳ ಮುಖ್ಯ ಉದ್ದೇಶವಾದರೆ 'ಮಾನಸಿಕ ಒತ್ತಡ' ಎಂಬ ಶಬ್ದ ಕಾಣಸಿಗುವುದೇ ಇಲ್ಲ. ●

➢ ಪುಟ 5 ರಿಂದ.....

ನಡೆಯುವ ಕ್ರೀಡಾಚಟುವಟಿಕೆಗಳನ್ನು ಇಲ್ಲಿ ರಾತ್ರಿ ನೋಡಲು ನೆರವು ನೀಡುತ್ತಿವೆ. ರಾತ್ರಿಯಲ್ಲಿ ಟಿ.ವಿ ನೋಡುವ ವಿದ್ಯಾರ್ಥಿ ಹಗಲಿನಲ್ಲಿ ಹೇಗೆ ಅಭ್ಯಾಸ ಮಾಡಬೇಕು? ಇದರ ಜೊತೆಯಲ್ಲಿ ಆಕರ್ಷಣೆಗಳು (ಮೊಬೈಲ್ ಇತ್ಯಾದಿ) ವಿದ್ಯಾರ್ಥಿಗಳಿಗೆ ಬಹುದೊಡ್ಡ ಸವಾಲನ್ನು ಒಡ್ಡುತ್ತಿವೆ. ಈ ತೊಂದರೆ ಗ್ರಾಮೀಣ ಮತ್ತು ನಗರ  ಎನ್ನದೆ ಎಲ್ಲ ವಿದ್ಯಾರ್ಥಿಗಳುಅನುಭವಿಸುತ್ತಿದ್ದಾರೆ. ಹೀಗೆ ಅನೇಕ ಸವಾಲುಗಳು ವಿದ್ಯಾರ್ಥಿಯ ಅಧ್ಯಯನದ ಸಮಯವನ್ನು ತಿಂದುಹಾಕುತ್ತಿರುವುದಂತು ಸತ್ಯವಾದದ್ದು.

## ಸವಾಲು ಎದುರಿಸಲು ನಮ್ಮ ತಯಾರಿ

ವಿದ್ಯಾರ್ಥಿಯು ಮುಂದಿನ ಜೀವನ ರೂಪಿಸುವಲ್ಲಿ ಸಹಾಯಕವಾಗುವ ಪರೀಕ್ಷೆಗಳನ್ನು ಯಶಸ್ವಿಯಾಗಿ ಎದುರಿಸಲು ಇಲಾಖೆ, ಶಿಕ್ಷಕರು, ಪಾಲಕರು ಮತ್ತು ಸಮುದಾಯದ ಸಾಮೂಹಿಕ ಪ್ರಯತ್ನದಿಂದ ಸಾಧ್ಯ, ಅದಕ್ಕಾಗಿ ರಾಜ್ಯದಲ್ಲಿ ಅನೇಕ ತಯಾರಿಗಳು ನಡೆಯುತ್ತವೆ ಅವುಗಳಲ್ಲಿ

- **ಡಂಗುರ ಸಾರುತ್ತಿರುವುದು (ಸೈರನ್ ಹಾಕುವುದು) :–** ರಾಜ್ಯದಲ್ಲಿ ಅನೇಕ ಗ್ರಾಮ ಪಂಚಾಯತಿಗಳು ಇಲಾಖೆಯ ಸಹಕಾರದಿಂದ ಗ್ರಾಮಗಳಲ್ಲಿ ಸಮೂಹ ಮಾಧ್ಯಮಗಳಿಂದ ಕೆಲಹೊತ್ತು ಆದರೂ ದೂರ ಇರುವಂತೆ ಮತ್ತು ವಿದ್ಯಾರ್ಥಿಗಳಿಗೆ ಸಹಾಯಕವಾಗುವ ಅಂಶಗಳನ್ನು ಪ್ರೇರೇಪಿಸಲು ತಮ್ಮ ವ್ಯಾಪ್ತಿಯಲ್ಲಿ ಮಾಡುತ್ತಿವೆ.
- **ಹೆಚ್ಚಿದ ತರಗತಿ ಅವಧಿಗಳು:–** ಶಾಲೆಗಳು ಇಂದು ಬೆಳಿಗ್ಗೆ ಬೇಗನೆ ತೆರೆಯುತ್ತಿವೆ ಮತ್ತು ಸಂಜೆಯವರೆಗೂ ವಿಶೇಷ ತರಗತಿಗಳು ನಡೆಯುತ್ತವೆ. ಇನ್ನೂ ಅನೇಕ ಕಡೆಗಳಲ್ಲಿ ಅಲ್ಲಿಯ ಊರಿನ ಸಹಕಾರ ಮತ್ತು ಮಠಮಾನ್ಯಗಳ ಸಹಕಾರದಿಂದ ರಾತ್ರಿ ತರಗತಿಗಳನ್ನು ನಡೆಸುತ್ತಿರುವುದನ್ನು ಕಾಣಬಹುದಾಗಿದೆ.
- **ಮಕ್ಕಳ ಹಾಜರಾತಿಯತ್ತ ಗಮನ:–** ಮಕ್ಕಳು ಗೈರು ಹಾಜರಿ ಎನ್ನುವುದು ನಗರ ಮತ್ತು ಗ್ರಾಮೀಣ ಭಾಗದಲ್ಲಿ ಎರಡರಷ್ಟು ಕಂಡು ಬರುವ ಅಂಶ. ಅದಕ್ಕಾಗಿ ಶಿಕ್ಷಕರು ಮಾಡುತ್ತಿರುವ ಸರ್ಕಸ್ ಅನೇಕ ಕಡೆಗಳಲ್ಲಿ ಫಲ ನೀಡುತ್ತಿದೆ. ಗ್ರಾಮೀಣ ಭಾಗದಲ್ಲಿ ಈ ಸವಾಲು ಎದುರಿಸುವುದು ಸುಲಭವಲ್ಲವಾದರೂ ಇತ್ತೀಚಿನ ದಿನಗಳಲ್ಲಿ ಸಮಾಧಾನಕರವಾದ ಫಲಿತಾಂಶ ಹೊರಬರುತ್ತಿದೆ. ಇದನ್ನು ಮೆಟ್ಟಿ ನಿಲ್ಲಲು ಎಲ್ಲರ ಪ್ರಯತ್ನ ಅವಶ್ಯಕವಾಗಿದೆ.

ಎಲ್ಲರೂ ಒಟ್ಟುಗೂಡಿ ಮಕ್ಕಳ ಫಲಿತಾಂಶ ಸುಧಾರಿಸುವಲ್ಲಿ ಮಾಡುವ ಪ್ರಯತ್ನಗಳು ಉತ್ತಮ ಫಲಿತಾಂಶ ನೀಡುವಲ್ಲಿ ಸಹಾಯಕವಾಗಬೇಕೆಂದರೆ ವಿದ್ಯಾರ್ಥಿಗಳ ಪಾತ್ರ ಬಹುದೊಡ್ಡದಾದದ್ದು. ವಿದ್ಯಾರ್ಥಿ ಮನಸ್ಸು ಮಾಡದ ಹೊರತು ಇಲಾಖೆ, ಶಿಕ್ಷಕರು, ಪಾಲಕರು ಮತ್ತು ಸಮಾಜ ಏನೆಲ್ಲ ಪ್ರಯತ್ನ ಮಾಡಿದರು ವಿದ್ಯಾರ್ಥಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಬದಲಾದ ಮನೋಭಾವ ಅಧ್ಯಯನದಿಂದ ದೂರ ಸರಿಯುವಂತೆ ಮಾಡುತ್ತಿವೆ. ಅದಕ್ಕಾಗಿ ಮೊದಲಿಗಿಂತಲೂ ಇಂದು ಎಲ್ಲರ ಸಾಂಘಿಕ ಪ್ರಯತ್ನ ಅವಶ್ಯವಿದೆ ಎಂದು ತಮಗನ್ನಿಸುವುದಿಲ್ಲವೇ? ●

➢ ಪುಟ 6 ರಿಂದ.....

ಸರ್ವತೋಮುಖವಾದ ಆರೋಗ್ಯವನ್ನು ರಕ್ಷಿಸಿಕೊಳ್ಳುವ ಹೊಣೆಗಾರಿಕೆಯು ಆ ನಾಡನ್ನಾಳುವ ಪ್ರಭುವಿನದ್ದಾಗಿರುತ್ತದೆ. ಪ್ರಜೆಗಳನ್ನು ಮಕ್ಕಳಂತೆ ಯಾವುದೇ ಭೇದಭಾವವನ್ನು ತೋರದೆ ಪ್ರೀತಿಯಿಂದ ನೋಡಬೇಕಾದ ಕರ್ತವ್ಯ ಅವನದಾಗಿರುತ್ತದೆ.ಅಷ್ಟೇ ಅಲ್ಲ, ಜನ್ಮಭೂಮಿಯ ಬಗೆಗೆ ಗೌರವ, ಭಕ್ತಿ, ಪ್ರೀತಿ ಇರಬೇಕಾದುದು ಅಗತ್ಯವಾಗಿರುತ್ತದೆ. ಪ್ರಜಾಧರ್ಮ, ರಾಜಧರ್ಮಗಳ ಪಾಲನೆಗೆ ನಿಸ್ವಾರ್ಥ ಮನೋಭಾವಕ್ಕೆ ಆದ್ಯತೆ ಕೊಡಬೇಕಾಗುತ್ತದೆ. ಇದೆಲ್ಲ ಅಂಶಗಳನ್ನು ರಾಮಾಯಣದಲ್ಲಿ ಗಮನಿಸುತ್ತೇವೆ. ಇವಲ್ಲದೆ, ಜನಕರಾಜನು ಮಗಳಾದ ಸೀತೆಯನ್ನು ಪತಿಗೃಹಕ್ಕೆ ಕಳುಹಿಸುವಾಗ, ವನವಾಸದ ಸಂದರ್ಭದಲ್ಲಿ ಪತಿವ್ರತೆಯಾದ ಅನಸೂಯಾದೇವಿಯು ಸೀತೆಗೆ ಉಪದೇಶಿಸಿದಾಗ ಆಡುವ ಮಾರ್ಗಸೂಚೀ ನುಡಿಮುತ್ತುಗಳು, ಶ್ರೀರಾಮನು ಬೇಡರ ರಾಜನಾದ ಗುಹನೊಡನೆ, ವಾನರ ರಾಜನೊಡನೆ ತೋರಿದ ನಿರ್ವ್ಯಾಜ ಸ್ನೇಹ ಸಂಸ್ಕಾರದ, ಮಾನವೀಯತೆಯ ಗುಣಗಳನ್ನು ಸಾಕ್ಷೀಕರಿಸುತ್ತವೆ. ಇವರೆಲ್ಲರೂ ಮೇಲೆ ಹೇಳಿದ ಐದೂ ಋಣಗಳನ್ನು ಸಲ್ಲಿಸುವ ಬದ್ಧತೆಯನ್ನು ತೋರುತ್ತಾರೆ. ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಪಾರ ನಿಷ್ಠೆಯನ್ನು ತೋರುತ್ತಾರೆ.

ಇಂದಿಗೂ 'ರಾಮರಾಜ್ಯ'ದ ಆದರ್ಶ ಅರಸನಾಗಿ ಮರ್ಯಾದಾ ಪುರುಷೋತ್ತಮನೆನಿಸಿಕೊಂಡ ಶ್ರೀರಾಮಚಂದ್ರನ ಚರಿತ್ರೆಯನ್ನು ಹೇಳುವ ರಾಮಾಯಣವು ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಎಲ್ಲ ಕಾಲಕ್ಕೂ ತಲುಪಿಸುತ್ತಿರುವ ಆದರ್ಶಗಳ ಭಂಡಾರವೇ ಆಗಿದೆ. ●

## ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಪತ್ರಿಕೆಯ ಪ್ರಾರೂಪ


(ಪ್ರಾರೂಪ 8, ವಿಧಿ 8)

| | |
|---|---|
| ಪ್ರಕಟಣೆಯ ಸ್ಥಳ | : ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಪ್ರಕಾಶಕ | : ಜೆ. ಎಂ. ಜೋಶಿ<br>ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.) |
| ಮಾಲೀಕತ್ವ | : ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.)<br>ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಸಂಪಾದಕ | : ಜೆ. ಎಂ. ಜೋಶಿ (ಮೇಲಿನದೇ ವಿಳಾಸ) |
| ಭಾರತದ ಪ್ರಜೆಯೇ | : ಹೌದು |
| ಮುದ್ರಕ | : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು – 560 019 |

ಮೇಲೆ ಕೊಟ್ಟಿರುವ ವಿಷಯಗಳು ನನ್ನ ನಂಬಿಕೆಯಲ್ಲಿ ಪೂರ್ಣ ಸತ್ಯವೆಂದು ನಾನು ಘೋಷಿಸುತ್ತೇನೆ.

ಬೆಂಗಳೂರು (ಸಹಿ) ಜೆ. ಎಂ. ಜೋಶಿ
1.3.2026 ಪ್ರಕಾಶಕ


➢ ಪುಟ 6 ರಿಂದ.....

ತಾವು ಉತ್ತಮ ವಿಜ್ಞಾನಿ ಎನ್ನುವುದನ್ನು ದೃಢೀಕರಿಸಿ ಇತರ ಯುವ ವಿಜ್ಞಾನಿಗಳಿಗೆ ಮಾರ್ಗದರ್ಶಕಿಯಾಗಿದ್ದಾರೆ. "ಶ್ರದ್ಧಾವಾನ್ ಲಭತೇ ಜ್ಞಾನಃ" ಎನ್ನುವಂತೆ ತಮ್ಮ ಶ್ರದ್ಧೆಯ ಮೂಲಕ ತನ್ನ ಕಲ್ಪನೆಯ ಕನಸನ್ನು ನನಸು ಮಾಡಿ ಪ್ರಪಂಚಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿದ ಮಹಿಳೆ ಶ್ರೀಮತಿ ಸಂಧ್ಯಾಶೆಣೈ. ಅವರ ಜೀವನದ ಪರಿಶ್ರಮವೇ "STEM" (Science, Technology Energy Medicine") ವಿದ್ಯಾರ್ಥಿಗಳಿಗೆ ಪ್ರೇರಕ ಶಕ್ತಿಯಾಗಿದೆ.

ಶ್ರೀನಿವಾಸ ಯುನಿವರ್ಸಿಟಿಯ ಛಾನ್ಸಲರ್ ಡಾ॥ ಸಿ.ಎ ರಾಘವೇಂದ್ರ ರಾವ್‌ರವ ಪ್ರಕಾರ "ಆಕೆಯ ಕೆಲಸ ಬರಿ ಪೇಪರ್‌ಗೆ ಮಾತ್ರ ಬರೆದ ಲೇಖನವಲ್ಲ. ಎಲ್ಲ ಕೈಗಾರಿಕೆಗಳಿಗೆ, ಮನೆಗಳಿಗೆ ಹಾಗೂ ಎಲ್ಲ ಮನಗಳಿಗೆ ಶಕ್ತಿತುಂಬುವ ಕೆಲಸವಾಗಿದೆ" ಎಂದಿದ್ದಾರೆ. ಮುಂದುವರೆದು ಸಂಧ್ಯಾಶೆಣೈ ರವರ ಕೆಲಸ ವಿಶ್ವವಿದ್ಯಾಲಯಕ್ಕೆ ಒಂದು ಹಿರಿಮೆ ಹಾಗೂ ಭಾರತದ ವಿಜ್ಞಾನ ಕ್ಷೇತ್ರದ ಬೆಳವಣಿಗೆಗೆ ಒಂದು ದ್ಯೋತಕವಾಗಿದೆ ಎಂದಿದ್ದಾರೆ.

ಭಾರತದ ಇತಿಹಾಸದಲ್ಲಿ ಈ ಹಿಂದೆಯೂ ಕೆಲವು ಮಹಿಳಾ ವಿಜ್ಞಾನಿಗಳು ತಮ್ಮ ವೈಜ್ಞಾನಿಕ ಕ್ಷೇತ್ರ ಸಾಧನೆಯನ್ನು ಜಗತ್ತಿಗೆ ಪರಿಚಯಿಸಿದ್ದಾರೆ. ವಿಷಾದನೀಯ ವಿಷಯವೇನೆಂದರೆ ಪ್ರಸ್ತುತ ಮಾಧ್ಯಮಗಳು ಬರೀ ಬಾಲಿವುಡ್‌ನ ನಟ, ನಟಿಯರು ಬಿಗ್‌ಬಾಸ್‌ನಲ್ಲಿ ಭಾಗವಹಿಸುವವರ ಹಿಂದೆ ಓಡಾಡುವುದರಲ್ಲಿ ನಿರತವಾಗಿವೆ. ಸೆಲೆಬ್ರಿಟಿಗಳು ಉಸಿರಾಡಿದರೆ, ನಿಂತರೆ, ಕೂತರೆ ಅದು ಒಂದು ಬಿಸಿಬಿಸಿ ಸುದ್ದಿಯಾಗುತ್ತದೆ.

ಸತತವಾಗಿ 3 ವರ್ಷಗಳಿಂದ ಪ್ರಪಂಚದ ಶ್ರೇಷ್ಠ ವಿಜ್ಞಾನಿಗಳ ಪಟ್ಟಿಯಲ್ಲಿ 2 ನೇ ಸ್ಥಾನದಲ್ಲಿ ನಿಂತ ಡಾ॥ ಸಂಧ್ಯಾಶೆಣೈರವರನ್ನು ಸಮಾಜಕ್ಕೆ ಏತಕ್ಕೆ ಪರಿಚಯಿಸುವುದಿಲ್ಲ ಎಂಬುದು ಅರ್ಥವಾಗದ ವಿಷಯ.

ಶಿಕ್ಷಕರಾದ ನಾವಾದರೂ ಶಿಕ್ಷಕಿ ಹಾಗೂ ಸಂಶೋಧಕಿಯಾಗಿರುವ ಸಂಧ್ಯಾ ಶೆಣೈ ಅವರನ್ನು ತುಂಬು ಹೃದಯದಿಂದ ಅಭಿನಂದಿಸೋಣ ಇಂಥವರ ಪರಿಚಯವನ್ನು ಎಲ್ಲರಿಗೂ ಮಾಡಿಕೊಡೋಣ.

ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ವಿಶೇಷವಾಗಿ ಒಬ್ಬ ಮಹಿಳಾ ವಿಜ್ಞಾನಿ ಬರಿ ಭಾರತಕ್ಕೆ ಮಾತ್ರವಲ್ಲ ಇಡೀ ಜಗತ್ತಿಗೆ ಅಪಾರ ಕೊಡುಗೆಯನ್ನು ನೀಡಿದ ಡಾ॥ ಸಂಧ್ಯಾ ಶೆಣೈರವರಿಗೆ ಶುಭ ಹಾರೈಸುತ್ತೇನೆ. ●

**ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದ ಚಿಂತನೆ ಆಲೋಚನೆ ತಾರ್ಕಿಕತೆ, ಒಳ್ಳೆಯ ಕೆಟ್ಟದ್ದನ್ನು ವಿಮರ್ಶಿಸುವ, ನಿರ್ಧರಿಸುವ ಸ್ವಾತಂತ್ರ್ಯವಿರುತ್ತದೆ.**
**ತನ್ನ ಜೀವನದ ಶಿಲ್ಪಿ ತಾನೇ ಎಂದು ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಪ್ರತಿಭಾ ಸಂಪನ್ನತೆಯನ್ನು ತಾನೇ ಎಂದೂ ಅರಿಯಲಾರರು.**

# ಚಿತ್ರ ಸುದ್ದಿ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆಯ ಮಾನ್ಯ ಆಯುಕ್ತರಿಗೆ ಮತ್ತು ಪ್ರೌಢ ಶಿಕ್ಷಣದ ನಿರ್ದೇಶಕರಾದ ಮಾನ್ಯ ಶ್ರೀ ಕೃಷ್ಣ ಜಿ ಕರಿಚನ್ನಣ್ಣನವರಿಗೆ ಶೈಕ್ಷಣಿಕ ಮತ್ತು ಶಿಕ್ಷಕರ ಸಮಸ್ಯೆಗಳಾದ

- ಅನುದಾನಿತ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳ ನೊಂದಣಿ ಸರಳೀಕರಣ ಮಾಡುವ ಕುರಿತು.
- ಜ್ಯೋತಿ ಸಂಜೀವಿನಿ ಯೋಜನೆಯನ್ನು ಅನುದಾನಿತ ಶಿಕ್ಷಕರಿಗೂ ವಿಸ್ತರಿಸುವ ಬಗ್ಗೆ.
- ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಪ.ಪೂ. ಉಪನ್ಯಾಸಕರ ಬಡ್ತಿ ಪ್ರಕ್ರಿಯೆಯನ್ನು ಬೇಗ ಪೂರ್ಣ ಗೊಳಿಸುವ ಬಗ್ಗೆ.
- ಕರ್ನಾಟಕದಲ್ಲಿ ತ್ರಿಭಾಷಾ ನೀತಿ ಮುಂದುವರೆಸುವ ಕುರಿತು.
- ಅನುದಾನಿತ ಖಾಲಿಹುದ್ದೆಗಳನ್ನು ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳಿಗೆ 2024ರವರಗೆ ಅನುದಾನ ನೀಡುವ ಬಗ್ಗೆ ಮತ್ತು ವಿವಿಧ ಬೇಡಿಕೆಗಳ ಬಗ್ಗೆ ಮನವಿ ಸಲ್ಲಿಸಲಾಯಿತು.





ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಕರ್ನಾಟಕ ಶಾಲಾ ಶಿಕ್ಷಣ ಮತ್ತು ಮೌಲ್ಯನಿರ್ಣಯ ಪರೀಕ್ಷಾ ಮಂಡಳಿಯ ಅಧ್ಯಕ್ಷರ ಆಪ್ತಕಾರ್ಯದರ್ಶಿ ಅವರನ್ನು ಭೇಟಿ ಮಾಡಿ, ಎಸ್.ಎಸ್.ಎಲ್.ಸಿ. ಕೋರ್ ವಿಷಯಗಳ ಪರೀಕ್ಷಾ ಪ್ರಶ್ನೆ ಪತ್ರಿಕೆಯ ವಿನ್ಯಾಸ ಬದಲಾವಣೆ ಕುರಿತಂತೆ ಚರ್ಚಿಸಿ ಮನವಿ ಪತ್ರ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಪಠ್ಯ ಪುಸ್ತಕದಲ್ಲಿ ಪರೀಕ್ಷರಣೆ ಕುರಿತು ಪದವಿಪೂರ್ವ ಶಿಕ್ಷಣ ಇಲಾಖೆಯ ಮಾನ್ಯ ನಿರ್ದೇಶಕರಾದ ಶ್ರೀ ಭರತ್ ಎಸ್. IAS ಮತ್ತು ಮಾನ್ಯ ಜಂಟಿ ನಿರ್ದೇಶಕರಾದ ಶ್ರೀ ರಾಜು ಎನ್ ಅವರನ್ನು ಭೇಟಿಮಾಡಿ ದಾಖಲೆಯನ್ನು ನೀಡಿ ಚರ್ಚಿಸಿದರು. ಧನಾತ್ಮಕವಾಗಿ ಸ್ಪಂದಿಸಿದರು ಮತ್ತು ಪಠ್ಯ ಪುಸ್ತಕದ ಪರೀಕ್ಷರಣೆಯ ಸಂದರ್ಭದಲ್ಲಿ ಈ ಅಂಶಗಳನ್ನು ಪರಿಗಣಿಸಲಾಗುವುದು ಎಂದು ಹೇಳಿದರು.



MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-03-2026
Date of Posting 20th or 21st of every month
Posted at Periodical Rate

# ಭಾರತದ ಶಿಕ್ಷಿತ ಜನರು ಚರಿತ್ರಯುತರಾಗಲಿ: ದತ್ತಾತ್ರೇಯ ಹೊಸಬಾಳೆ





ಧಾರವಾಡ: ನಮ್ಮೆಲ್ಲರ ಹೊಣೆಗಾರಿಕೆ ನಮ್ಮ ದೇಶದ ಶಿಕ್ಷಣ ಬೇರೆ ಯಾವುದೇ ದೇಶ ಸರಿಗಟ್ಟಬಲ್ಲ ಶಿಕ್ಷಣ ನಿರ್ಮಾಣ ಮಾಡುವುದು ಹೇಗೆ? ಎಂದು ಚಿಂತಿಸುವುದಾಗಿದೆ. ಇಂದು ಭಾರತೀಯರು ಗುಣಾತ್ಮಕ ಶಿಕ್ಷಣ ನಿರ್ಮಾಣ ಮಾಡುವತ್ತ ಸಾಗಬೇಕಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹರಾದ ದತ್ತಾತ್ರೇಯ ಹೊಸಬಾಳೆ ಹೇಳಿದರು.

ನಗರದ ಶ್ರೀ ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರ ಸತ್ತೂರಿನಲ್ಲಿ  ರಾಷ್ಟ್ರೀಯ ಸ್ವಯಂಸೇವಕ ಸಂಘ ಕರ್ನಾಟಕ ಉತ್ತರ ವತಿಯಿಂದ ಸಂಘ ಶತಾಬ್ಧಿ ಹಿನ್ನೆಲೆ ರವಿವಾರ ಆಯೋಜಿಸಿದ್ದ 'ಸಂಘ 100– ಪ್ರಾಧ್ಯಾಪಕರ ಸಮಾವೇಶ' ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಅವರು ಮಾತನಾಡಿದರು.

ಇಂದು ಭಾರತ ಆರ್ಥಿಕ ಮತ್ತು ಆಹಾರ ರಂಗದಲ್ಲಿ ಅಷ್ಟೇ ಅಲ್ಲದೇ ಶಿಕ್ಷಣ ಮತ್ತು ಜ್ಞಾನದ ರಂಗದಲ್ಲಿ ಸ್ವಾವಲಂಬಿಯಾಗಬೇಕು. ಭಾರತದ ಶಿಕ್ಷಿತ ಜನರು ಚರಿತ್ರಯುತರಾಗಬೇಕು. ದೇಶದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ದೂರುತ್ತಿರುವವರು ಶಿಕ್ಷಿತರೇ! ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದವರು ಭ್ರಷ್ಟಾಚಾರಿಗಳಾಗಿ ಸಮಾಜ ಕೊಳ್ಳೆಹೊಡೆಯುತ್ತಿದ್ದಾರೆ ಎಂದಾದರೆ, ದೇಶಕ್ಕೆ ದ್ರೋಹ ಮಾಡ್ತಾರೆ ಎನ್ನುವುದಾದರೆ ನಾವು ಎಲ್ಲಿ ತಪ್ಪಿದ್ದೀವಿ ಎಂಬುದನ್ನು ನೆರೆದಿರುವ ಪ್ರಾಧ್ಯಾಪಕರು ಗಮನಿಸಬೇಕು. ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ಗುಣಾತ್ಮಕತೆ ಮತ್ತು ಚಾರಿತ್ರ್ಯ ನಿರ್ಮಾಣವಾದಾಗ ಮಾತ್ರ ಜನರು ಅದನ್ನು ಒಪ್ಪಿಕೊಳ್ಳುತ್ತಾರೆ. ನಮ್ಮ ಬಗ್ಗೆ ಸಂಸ್ಕೃತಿ ಅರಿವಿನಲ್ಲಿ ನಾವು ಅರಿತುಕೊಳ್ಳಬೇಕು, ಜೊತೆಗೆ ಆತ್ಮಗೌರವ ಪಡೆಯುವುದರ ಬಗ್ಗೆ ಹಿಂದೇಟು ಹಾಕಬಾರದು ಎಂದರು.

ಭಾರತದ ಕಲ್ಪನೆ, ಇಲ್ಲಿನ ಅರಿವಿನ ಬಗ್ಗೆ ತಿಳಿಸುವ ಕಾರ್ಯ ಆಗಬೇಕಿದೆ. ಆಧುನಿಕ ಸಮಾಜದ ಸಂಸ್ಕೃತಿಯಲ್ಲಿ ಎಲ್ಲಿ ಕೊರತೆ ಇದೆ ಎಂಬುದನ್ನು ಅಧ್ಯಯನ ಮಾಡುವ ಅವಶ್ಯಕತೆ ಇದೆ. ಡಾ. ಎಸ್. ರಾಧಾಕೃಷ್ಣನ್ ಅವರ ಉನ್ನತ ಶಿಕ್ಷಣದ ಸಮಿತಿಯ ಗುಣಾತ್ಮಕತೆ ಬಗ್ಗೆ ತಿಳಿಸಿರುವುದನ್ನು ಒಂದು ಬಾರಿ ಮೆಲಕು ಹಾಕಬೇಕಿದೆ ಎಂದು ಪ್ರಾಧ್ಯಾಪಕರನ್ನು ಎಚ್ಚರಿಸಿದರು.

ಭಾರತ ಯಾವಾಗಲೂ ಲೋಕ ಕಲ್ಯಾಣವನ್ನು ಬಯಸುತ್ತದೆ. ಭಾರತ ಬೆಳೆಯಬೇಕು, ಜಗತ್ತಿಗೆ ಒಂದು ದೀಪಸ್ತಂಭ ಆಗಬೇಕು. ಜಗತ್ತಿಗೆ ಬದುಕುವಂತ ಉದ್ದೇಶ ಏನು ಎಂಬುದನ್ನು ಕಲಿಸಲಿಕ್ಕಾಗಿ ಈ ದೇಶ ಏಳಬೇಕು ಮತ್ತು ಬೆಳೆಯಬೇಕಾಗಿದೆ ಎಂದು ಹೇಳಿದರು.

ಅವಧಿಯ ನಂತರದಲ್ಲಿ ಪ್ರಾಧ್ಯಾಪಕರು ಕೇಳಿದ ಪ್ರಶ್ನೆಗಳಿಗೆ ಸಂವಾದದಲ್ಲಿ ಹೊಸಬಾಳೆ ಅವರು ಉತ್ತರಿಸಿದರು.

ಕಾರ್ಯಕ್ರಮದಲ್ಲಿ ದಕ್ಷಿಣ ಮಧ್ಯ ಕ್ಷೇತ್ರ ಸಂಘಚಾಲಕ ಡಾ. ವಾಮನ್ ಶೆಣೈ, ಕರ್ನಾಟಕ ಉತ್ತರ ಪ್ರಾಂತ ಸಂಘಚಾಲಕ ಬಸವರಾಜ ಡಂಬಳ, ಅಖಿಲ ಭಾರತೀಯ ಸಹ ಬೌದ್ಧಿಕ ಪ್ರಮುಖರಾದ ಸುಧೀರ್, ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಸಂಘದ ವಿದ್ಯಾಲಯ ಪ್ರಮುಖ ಶಿವಾನಂದ ಸಿಂಧನಕೇರಾ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ರಾಜ್ಯ ಅಧ್ಯಕ್ಷರಾದ ಸಂದೀಪ ಬೂದಿಹಾಳ ಸೇರಿದಂತೆ ವಿಶ್ವವಿದ್ಯಾಲಯ, ಸಂಲಗ್ನಿತ ಪದವಿ ಮಹಾವಿದ್ಯಾಲಯಗಳು, ವೈದ್ಯಕೀಯ, ತಾಂತ್ರಿಕ, ಕಾನೂನು, ಶಿಕ್ಷಣ ಮತ್ತು ಸಾಮಾನ್ಯ ಪದವಿ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಉಪನ್ಯಾಸಕರು, ಬೋಧನಾ ಸಹಾಯಕರು, ಅತಿಥಿ ಉಪನ್ಯಾಸಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ 1704 ಉಪನ್ಯಾಸಕರು ಉಪಸ್ಥಿತರಿದ್ದರು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com